॥ಶ್ರೀಃ॥

ಪ್ರಿಯ ಆಧ್ಯಾತ್ಮಬಂಧುಗಳೇ,

ಅಪ್ರತಿಮ ಶ್ರೀಹರಿವಾಯುಭಕ್ತರಾದ ವಿಶೇಷವಾಗಿ ಶ್ರೀಮನ್ಮಧ್ವಸಿದ್ಧಾಂತವನ್ನು ಪ್ರಸಾರ-ರಕ್ಷಣೆಗಳಿಗಾಗಿಯೇ ಪವಿತ್ರಕರ್ಮಭುವಿಯೆನಿಸಿದ ನಮ್ಮ ಹೆಮ್ಮೆಯ ಭಾರತದೇಶದಲ್ಲಿ ಕನ್ನಡನಾಡಿನ ತೌಳವ ಮಂಡಲದಲ್ಲಿ ಅವತರಿಸಿದ ಸಾಧಕೋತ್ತಮಪರಂಪರೆಯಲ್ಲಿ ವಿಶಿಷ್ಟವಾಗಿ ವಿಜೃಂಭಿಸಿದ ಮಹಾನುಭಾವರು ಶ್ರೀಶ್ರೀಮದ್ವಾದಿರಾಜತೀರ್ಥಗುರುಸಾರ್ವಭೌಮರು. ಸಂತತ ಸ್ಮರಣೀಯರು. ಶ್ರೀಸೋದಾ ಗುರುರಾಜರೆಂದೇ ಪ್ರಸಿದ್ಧರು. ಅನುಪಮಪಂಡಿತರು, ಸೃಜನಶೀಲ ಕವಿವರೇಣ್ಯರು, ಅಸಾಮಾನ್ಯ ದಕ್ಷಆಡಳಿತಗಾರಾರು, ಸಾರ್ಥಕ ಸಮಾಜಸುಧಾರಕರು, ಸ್ಪಷ್ಟಚಿಂತನಶೀಲರು. ಈ ರೀತಿಯ ಶ್ರೀಗುರುರಾಜರ ಸರ್ವಾಂಗೀಣವಾದ ಭವ್ಯವ್ಯಕ್ತಿತ್ವಕ್ಕೆ ಮುಕುಟವಾದುದು **ಶ್ರೀಹರಿವಾಯುಭಕ್ತಿ** ಹಾಗೂ **ಶ್ರೀಮನ್ಮಧ್ವಸಿದ್ಧಾಂತದೀಕ್ಷೆ**. ಅದಕ್ಕೆ ದೃಷ್ಟಾಂತಗಳು ಅವರ ಅಸಂಖ್ಯಕೃತಿರತ್ನಗಳೇ. ಆ ಶ್ರೇಷ್ಠಕೃತಿರತ್ನಮಾಲಿಕೆಯಲ್ಲಿ ಒಂದು ವಿಶಿಷ್ಟಕೃತಿರತ್ನ **ತೀರ್ಥಪ್ರಬಂಧ**. ಸಂಸ್ಕೃತ-ಪ್ರವಾಸಸಾಹಿತ್ಯಮಾಲೆಯಲ್ಲೇ ಮೇರುಕೃತಿಯಾಗಿ ವಿಜೃಂಭಿಸಿದೆ. ಸಕಲ ಯಾತ್ರಾರ್ಥಿಗಳ ಅನುಷ್ಠಾ-ನಾನುಸಂಧಾನರೂಪಸಾಧನೆಗೆ ಬಹಳ ಅನುಕೂಲಕರವಾದ ಅನುಪಮಮಾರ್ಗದರ್ಶಕಗ್ರಂಥ. ಒಟ್ಟು ಇನ್ನೂರ ಮೂವತ್ತೈದು ಶ್ಲೋಕಗುಚ್ಛಗಳ ಮೂಲಕ ವೇದೋಪನಿಷತ್ತು, ಶ್ರೀಮನ್ಮಹಾಭಾರತರಾಮಾಯಣಭಾಗವತ, ಅಷ್ಟಾದಶ ಪುರಾಣಗಳ ಸಾರಭಾಗನಿರೂಪಣೆ, ಚರಿತ್ರೆ, ಸಾಹಿತ್ಯ, ಪದಲಾಲಿತ್ಯಗಳೊಂದಿಗೆ ತತ್ತ್ವವಾದದರ್ಶನ-ಗಳ ಉತ್ಕೃಷ್ಟಮಿಶ್ರಣದ ಸವಿಯನ್ನೀಯುವ ಗ್ರಂಥ. ಸರ್ವಾತ್ಮನಾ ಸರ್ವದಾ ಪಾರಾಯಣ, ಚಿಂತನಾದ್ಯ-ನುಷ್ಠಾನಾನುಸಂಧಾನಾದಿಸಾಧನಯೋಗ್ಯವಾದ ಗ್ರಂಥ.

ಪ್ರಸ್ತುತ ಶ್ರೀತೀರ್ಥಪ್ರಬಂಧವು ಶ್ರೀಸೋದಾಗುರುರಾಜರ ಉತ್ಕೃಷ್ಟೋಪಾಸ್ಯಗುರುಗಳಾದ ಶ್ರೀಮಟ್ಟೀಕಾಕೃತ್ಪಾದಗುರುಸಾರ್ವಭೌಮರ ಮೂಲಬೃಂದಾವನವು ನವವೃಂದಾವನದ ನಡುಗಡ್ಡೆಯಲ್ಲಿದೆ ಎಂಬ ವಿವಾದಾಸ್ಪದವಿಷಯದಲ್ಲಿ ಪ್ರಮಾಣವೆಂದೆನಿಸುವ ಹಾಗೂ ಪ್ರಮಾಣವಾಗುವ ಕೃತಿಯೂ ಅಲ್ಲ. ಶ್ರೀಸೋದಾ-ಗುರುರಾಜರು ತೀರ್ಥಪ್ರಬಂಧದಲ್ಲಿ ನಿವೇಶಮಾಡಿರುವ ಶ್ಲೋಕಗಳೆರಡೂ ನಮ್ಮೆಲ್ಲರ ನಿತ್ಯಾರಾಧ್ಯರಾದ ಶ್ರೀಮಟ್ಟೀಕಾಕೃತ್ಪಾದರ ಮೂಲಬೃಂದಾವನದ ವರ್ಣನೆಯನ್ನು ನವವೃಂದಾವನದ ಗಡ್ಡೆಯಲ್ಲಿ ಮಾಡುತ್ತಿಲ್ಲ. **"ರಾಜಧಾನೀ ಜಯತಿ ಸಾ ಗಜಗಹ್ವರಸಂಜ್ಞಿತಾ | ಯತ್ರ ಭಾಂತಿ ಗಜಾ ಮಧ್ವರಾದ್ಧಾಂತಧರಣೀಧರಾಃ ||"** ಎಂಬ ಮೊದಲಶ್ಲೋಕವು ಶ್ರೀಮಧ್ವಸಿದ್ಧಾಂತವೆಂಬ ಧರಣಿಯನ್ನು ಧರಿಸಿ ಸಂರಕ್ಷಿಸಿದ ನಿತ್ಯಸಂಸ್ಮರಣೀಯ-ಗುರುವರೇಣ್ಯರಾದ ಶ್ರೀಶ್ರೀಪದ್ಮನಾಭತೀರ್ಥಗುರುಸಾರ್ವಭೌಮರ, ಶ್ರೀಶ್ರೀಕವೀಂದ್ರತೀರ್ಥಗುರುಸಾರ್ವಭೌಮರ, ಶ್ರೀಶ್ರೀವಾಗೀಶತೀರ್ಥಗುರುಸಾರ್ವಭೌಮರ, ಶ್ರೀಶ್ರೀವ್ಯಾಸರಾಜಗುರುಸಾರ್ವಭೌಮರ ಸನ್ನಿಧಿಯ ವರ್ಣನೆಯನ್ನು ಮಾಡುತ್ತಿದೆ. ಇನ್ನು **"ಮಾಧ್ವಗ್ರಂಥಾನ್ ಸ್ವಬಂಧೂನಿವ ಸರಸಹೃದಾಽಽಲಿಂಗ್ಯ ವಿಜ್ಞಾತಭಾವಃ ಸಂಯೋಜ್ಯಾ-ಲಂಕೃತಾಭಿಃ ಸ್ವಸಹಜಮತಿಸಂಭೂತವಾಗ್ಭಿರ್ವಧೂಭಿಃ ಕೃತ್ವಾಽನ್ಯೋಕ್ತೀಶ್ಚ ದಾಸೀರ್ಬುಧಹೃದಯಗುಹಂ ಪ್ರೌಢವೃತ್ತೀಶ್ಚ ವೃತ್ತೀಃ ದತ್ವಾ-ಽನ್ಯೋನ್ಯಾಭಿಯೋಗಂ ಜಯಮುನಿರಸಕೃತ್ ವೀಕ್ಷ್ಯ ರೇಮೇ ಕೃತಾರ್ಥಃ"** ಎಂಬ

ಎರಡನೆಯ ಶ್ಲೋಕವು ಶ್ರೀಮಟ್ಟೀಕಾಕೃತ್ಪಾದರು ಶ್ರೀಮನ್ಮಧ್ವಾಚಾರ್ಯರ ಗ್ರಂಥಗಳನ್ನು ತಮ್ಮ ಮನೆಗೆ ಆಗಮಿಸಿದ ಬಂಧುಗಳೆಂದು ಭಾವಿಸಿ ಸ್ನೇಹಪೂರ್ಣ-ಮನಸ್ಸಿನಿಂದ ಸ್ವೀಕರಿಸಿ, ಸ್ವಾಗತಿಸಿ, ಆಲಂಗಿಸಿ ಅವುಗಳ ಭಾವಾರ್ಥ-ಅಂತರಾರ್ಥಗಳನ್ನು ಸ್ಪಷ್ಟವಾಗಿ ಚೆನ್ನಾಗಿ ತಿಳಿದು ದೈವದತ್ತವಾದ ತಮ್ಮ ಕುಶಾಗ್ರಮತಿಯಿಂದ ಉತ್ಪನ್ನವಾದ ಟೀಕಾ ರೂಪದವಚನಗಳೆಂಬ ವಧೂಗಳ ಜೊತೆಗೂಡಿಸಿ [ವಿವಾಹವನ್ನು ಮಾಡಿ] ಪರಮತೀಯ ಮಾತುಗಳನ್ನು ದಾಸದಾಸಿಯರನ್ನಾಗಿಸಿ ವಿದ್ವಾಂಸರ ಹೃದಯಗೃಹಗಳನ್ನು ದತ್ತಿನೀಡಿ ಜೀವನನಿರ್ವಹಣೆಗಾಗಿ ತಮ್ಮ ಪ್ರಚಂಡವಾದ ಪಾಂಡಿತ್ಯವನ್ನು ಧಾರೆಯೆರೆದು ಶ್ರೀಮದಾಚಾರ್ಯರ ಮೂಲಗ್ರಂಥಗಳ ಹಾಗೂ ತಮ್ಮ ಟೀಕೆಗಳ ಪರಸ್ಪರ ಹೊಂದಾಣಿಕೆಯನ್ನು ನೋಡಿ ಕೃತಕೃತ್ಯರಾಗಿ ಆನಂದಪಡುವ ಶ್ರೀಶ್ರೀಮಟ್ಟೀಕಾಕೃತ್ಪಾದ-ರನ್ನು ವರ್ಣಿಸುತ್ತದೆ. ಈ ಶ್ಲೋಕದಲ್ಲಿ ಯಾವ ಸ್ಥಳವೆಂದು ನಿರ್ದೇಶಿಸಿಲ್ಲ. ಆದರೆ ತೀರ್ಥಪ್ರಬಂಧವ್ಯಾಖ್ಯಾನದಲ್ಲಿ **"ಗಜಗಹ್ವರೇ ವರ್ಣಯತಿ"** ಎಂದು ಅವತಾರಿಕೆಯನ್ನು ನೀಡಿದ್ದಾರೆ ಎಂಬ ಮಾತನ್ನು ಹೇಳುವವರಿದ್ದಾರೆ. ಆದರೆ ಓದುಗ ಜಿಜ್ಞಾಸುವು ಸ್ವಲ್ಪ ಮುಕ್ತಮನಸ್ಸಿನ ಚಿಂತಕನಾದಾಗ ತಿಳಿಯುವ ಸಂಗತಿಯು ಬೇರೆಯೇ ಇದೆ. ವ್ಯಾಖ್ಯಾನಕಾರರು ಗಜಗಹ್ವರವನ್ನು ನಮೂದಿಸಿ ಅವತಾರಿಕೆಯನ್ನು ಕೊಡಲು ಸಾಧ್ಯವಿಲ್ಲ. ಏಕೆಂದರೆ ಮೊದಲನೆಯದಾಗಿ ಆ ಶ್ಲೋಕದಲ್ಲಿ ಗಜಗಹ್ವರದ ಪ್ರಸ್ತಾವವಿಲ್ಲ. ಪೂರ್ವ ಪ್ರಸ್ತುತವಾಗಿದೆ ಎಂದರೆ ಅದು ಸ್ಪಷ್ಟ-ಗಮಕವಾಗುವುದಿಲ್ಲ. ಶ್ರೀಸೋದಾ ಗುರುರಾಜರು ನವವೃಂದಾವನ ಕ್ಷೇತ್ರಕ್ಕೆ ಪ್ರತ್ಯಕ್ಷವಾಗಿಯೇ [ದೈಹಿಕವಾಗಿ] ಹೋಗಿದ್ದಲ್ಲಿ ಈ ಪೂರ್ವಪ್ರಸ್ತುತಿಯನ್ನು ಅಂಗೀಕರಿಸಬಹುದಿತ್ತು. ಶ್ರೀಸೋದಾಗುರುರಾಜರು ಅನೇಕ ಬಾರಿ ಅಖಂಡ ಭಾರತ ತೀರ್ಥಸ್ನಾನ ಹಾಗೂ ಕ್ಷೇತ್ರಸಂದರ್ಶನಗಳನ್ನು ಮಾಡಿದ್ದರೂ ಈ ತೀರ್ಥಪ್ರಬಂಧದ ರಚನೆಯ ಸಂದರ್ಭದಲ್ಲಿ ದೈಹಿಕವಾಗಿ ಯಾತ್ರೆಯನ್ನು ಮಾಡುತ್ತಲೇ ಈ ಕೃತಿಯ ರಚನೆಯನ್ನು ಮಾಡಿದ್ದಾರೆ ಎಂದು ಹೇಳುವುದು ಸಮಂಜಸವಲ್ಲ. ಏಕೆಂದರೆ ಅದು ವಾಸ್ತವವೂ ಅಲ್ಲ. ಈ ಅಂಶವನ್ನು ತಿಳಿಯುವ ಓದುಗ ಜಿಜ್ಞಾಸು ಮೊದಲು ಶ್ರೀಸೋದಾಗುರುರಾಜರ ಈ ತೀರ್ಥಪ್ರಬಂಧದ ರಚನೆಯ ಕ್ರಮವನ್ನು ಅವಲೋಕಿಸಲು ಪ್ರಯತ್ನಿಸಿದರೆ ಸ್ಪಷ್ಟವಾಗುವುದು.

ಶ್ರೀಸೋದಾಗುರುರಾಜರ ಕೆಲವು ಮಾತುಗಳನ್ನು ಅವಲೋಕಿಸಲು ಪ್ರಯತ್ನಿಸೋಣ. ತೀರ್ಥಪ್ರಬಂಧದ ರಚನೆಯ ಸಮಯ ಮತ್ತು ಹಿನ್ನೆಲೆಯ ಸ್ಪಷ್ಟತೆಯಿಲ್ಲವಾದರೂ ಕೃತಿರಚನೆಯ ಉದ್ದೇಶ ಬಹಳ ಸ್ಪಷ್ಟವಾಗಿದೆ, ಈ ದಿಸೆಯಲ್ಲಿ ಸಾಗಿದಾಗ ಓದುಗ ಜಿಜ್ಞಾಸುವಿಗೆ ಕಾಣಸಿಗುವ ಸಂಗತಿಯೆಂದರೆ - ತೀರ್ಥಯಾತ್ರೆಯ ಉತ್ಕಟ ಅಪೇಕ್ಷೆ ಮತ್ತು ಅದಕ್ಕೆ ಪ್ರತಿಬಂಧಕವಾದ ವಾರ್ಧಕ್ಯ ಅಥವಾ ಅಶಕ್ತಿಗಳನ್ನು ಹೊಂದಿದ ಭಕ್ತರ ಹಾಗೂ ಶಿಷ್ಯರ ಉದ್ಧಾರಕ್ಕಾಗಿ ಪರಮಕರುಣಾಳುಗಳಾದ ಮಹಾಸಮರ್ಥರಾದ ಶ್ರೀಸೋದಾಗುರುರಾಜರು ತಾವು ಇರುವ ಸ್ಥಳದಲ್ಲಿಯೇ ಆ ಕ್ಷಣಕ್ಕೆ ಈ ಇನ್ನೂರಮೂವತ್ತೈದು ಶ್ಲೋಕಗಳ ಸರ್ವಾಂಗಸುಂದರಕೃತಿಯನ್ನು ರಚಿಸಿ ಅನುಗ್ರಹಿಸಿರುವರು. ಅಂತೆಯೇ ಅದನ್ನು ಪಠಿಸಲು ಆದೇಶಿಸಿ ಕುಳಿತಲ್ಲೇ ಆ ಅಖಂಡ ಭಾರತ ತೀರ್ಥಕ್ಷೇತ್ರ-ಯಾತ್ರೆಯ ಮಹಾಫಲವನ್ನು ಹೊಂದುವಂತೆ ಅನುಗ್ರಹಿಸಿರುವರು. ಆ ರೀತಿಯಲ್ಲಿ ಅನುಪಮಕೃತಿರಚನೆಯ ಸಾಮರ್ಥ್ಯ ಮತ್ತು ಕುಳಿತಲ್ಲೇ ಸಕಲಕ್ಷೇತ್ರತೀರ್ಥಗಳ ದರ್ಶನಸ್ನಾನಾದಿಸಾಧನಗಳ ಮಹಾಫಲವನ್ನು

ಭಗವಂತನಿಂದ ಕೊಡಿಸುವ ಭಕ್ತಿ, ಸಾಮರ್ಥ್ಯಗಳು ಮಹಿಮಾನ್ವಿತಗುರುಗಳಾದ ಶ್ರೀಸೋದಾಗುರುರಾಜರಲ್ಲಿ ಅಸಂಭಾವಿತವಾದುದೇನಲ್ಲ ಎಂಬುದು ಸರ್ವವಿದಿತ. ಈ ಹಿನ್ನೆಲೆಯಲ್ಲೇ ಇಂದಿಗೂ ತೀರ್ಥಪ್ರಬಂಧದ ಪಾರಾಯಣ ಸಾಧನೆಯ ಪದ್ಧತಿಯು ಮಾಧ್ವಪರಂಪರೆಯಲ್ಲಿದೆ. ಏಕೆಂದರೆ ಈ ತೀರ್ಥಪ್ರಬಂಧದ ಪಾರಾಯಣ-ದಿಂದ ಸರ್ವಯಾತ್ರಾ ಫಲವನ್ನು ಹೊಂದುವ ವಿಶ್ವಾಸ. ಇದಕ್ಕೊಂದು ಉತ್ತಮನಿದರ್ಶನ ಸದ್ಧರ್ಮರತರಾದ ಉತ್ಕೃಷ್ಟ-ಮಂತ್ರಸಿದ್ಧವಿದ್ವಾಂಸರಾದ ಕೀರ್ತಿಶೇಷರಾದ ಶ್ರೀರಾಮಕೃಷ್ಣತಂತ್ರಿಗಳು.

ಭಕ್ತಶಿಷ್ಯಕೋಟಿಯ ಅಪೇಕ್ಷೆಗಾಗಿ ಉದ್ಧಾರಕ್ಕಾಗಿಯೇ ಆಶುಕವಿಗಳಾದ ಆಧ್ಯಾತ್ಮಸಾಧಕಮುಕುಟಮಣಿ-ಗಳಾದ ಶ್ರೀಸೋದಾಗುರುರಾಜರಿಂದ ಹೊರಹೊಮ್ಮಿದ ಕೃತಿ ತೀರ್ಥಪ್ರಬಂಧ. ಈ ಕೃತಿಯ ರಚನೆಯನ್ನು ದೈಹಿಕವಾಗಿ ಪ್ರತ್ಯಕ್ಷವಾಗಿ ಕ್ಷೇತ್ರಕ್ಕೆ ಗಮಿಸಿ ದರ್ಶಿಸಿ ಸ್ತುತಿಸಿದ್ದು ಎಂದು ಹೇಳಿದರೆ ಅನೇಕ ವಿರೋಧಗಳು ಬರುವುವು. ಹಿಂದೆ ಮಾಡಿದ ಯಾತ್ರೆಯ ಅನುಭವದ ಹಿನ್ನೆಲೆಯಲ್ಲಿ ಮಾನಸಿಕ ಚಿಂತನೆಯ ಮೂಲಕ ತೀರ್ಥಕ್ಷೇತ್ರಗಳ ಅಧಿಪತಿಗಳಾದ ಹರಿವಾಯುದೇವತೆಗಳ ಸ್ಮರಣೆಯನ್ನು ಮಾಡುತ್ತಾ ಅವರನ್ನು ವರ್ಣಿಸುತ್ತಾ ಈ ತೀರ್ಥಪ್ರಬಂಧವನ್ನು ರಚಿಸಿದ್ದಾರೆ ಎಂದರೆ ಯಾವದೇ ವಿರೋಧವೂ ಬರುವುದಿಲ್ಲ ಬದಲಾಗಿ ಅನೇಕ ಶಂಕೆಗಳೂ ಪರಿಹೃತವಾಗುತ್ತವೆ. ಅದು ಹೇಗೆ ಎಂದು ಕೆಲವು ಮಾತುಗಳಲ್ಲಿ ನೋಡೋಣ.

ಶ್ರೀಸೋದಾಗುರುರಾಜರ ಪ್ರಾರಂಭದ ಮಂಗಲಪದ್ಯದಲ್ಲಿಯೇ **“ಹರಿಕ್ಷೀರಾಂಬುಧೇಃ ಸ್ವೈರಂ ಭವಘರ್ಮರಿಪೋ ರ್ಮನಃ | ವಿಹರಾಹರಹಶ್ಚಿತ್ರಚಾರಿತ್ರಚತಿರೋರ್ಮಿಷು ||**” ಎಂದು ಮನಸ್ಸನ್ನು ಸಂಬೋಧಿಸಿ **“ಹೇ ಮನಸ್ಸೇ ನೀನು ಶ್ರೀಹರಿಯನ್ನು ನಿರಂತರ ನೆನೆಯುತ್ತಿರು”** ಎಂದು ಆದೇಶಿಸುತ್ತಾರೆ. ಈ ಮಾತಿನ ಮೂಲಕ ಈ ಕೃತಿಯಲ್ಲಿ ಸಂಪೂರ್ಣ ಮಾನಸಿಕವ್ಯಾಪಾರವೇ ಎಂದು ಸ್ಪಷ್ಟಪಡಿಸುತ್ತಾರೆ. ಮುಂದೆ **“ಆಜನ್ಮಭೂಮೇ-ರಟತೋಽಖಿಲೇಷು ತೀರ್ಥೇಷು ತದ್ವರ್ಣನಭಾರಮೂಢ್ವಾ| ಆಯಾಸಮಸ್ಮನ್ಮೃದುಮಾನಸಸ್ಯ ವಾಯುರ್ಮುಹುಃ ಕೃಂತತು ಮಧ್ವರೂಪೀ||”** ಎಂದು **“ತೀರ್ಥಕ್ಷೇತ್ರವರ್ಣನೆರಚನೆಗಳ ಹಿನ್ನೆಲೆಯಲ್ಲಿರುವ ಮಾನಸಿಕ ಭಾರದ ಪರಿಣಾಮವಾದ ಮನಸ್ಸಿನ ಆಯಾಸವನ್ನು ಶ್ರೀಮಧ್ವರೂಪಿಯಾದ ತಂಗಾಳಿಯು ಪರಿಹರಿಸಲಿ”** ಎಂದು ಪ್ರಾರ್ಥಿಸುವುದರ ಮೂಲಕ ಈ ತೀರ್ಥಪ್ರಬಂಧವು ಮಾನಸಾನುಸಂಧಾನದಿಂದಲೇ ರಚಿತವಾದ ಕೃತಿಯೆಂಬುದು ಸ್ಪಷ್ಟವಾಗುವುದು. ಇಲ್ಲಿ ಓದುಗ ಸಾಧಕನು ಗಮನಿಸಬೇಕಾದ ಸಂಗತಿಯೆಂದರೆ “**ಅಟತಃ**” ಎಂಬ ವಿಶೇಷಣವು **ಅಸ್ಮನ್ಮೃದುಮಾನಸಕ್ಕೇ** ಹೊರತು **ಅಸ್ಮಚ್ಛಬ್ದಕ್ಕಲ್ಲ**[1] ಎಂಬುದು ಸಂಸ್ಕೃತ-ಭಾಷೆಯ ಸಾಮಾನ್ಯತಿಳುವಳಿಕೆಯಿದ್ದವರಿಗೂ ಸ್ಫುಟವಾಗುವುದು. ಅಂತೆಯೇ ಶ್ರೀಸೋದಾಗುರುರಾಜರು ತಮ್ಮ ಆಶ್ರಮಗುರುಗಳಾದ ಪ್ರಾತಃಸ್ಮರಣೀಯರಾದ ಶ್ರೀಶ್ರೀವಾಗೀಶತೀರ್ಥಗುರು ಸಾರ್ವಭೌಮರನ್ನು **“ವಾಗೀಶತೀರ್ಥ-ಮುನಿವರ್ಯ ಭವದ್ದಯಾಂಬುಯೋಗೇನ ಪಾವಯ ಮನೋಗೃಹಮನ್ವಹಂ ಮೇ| ನಾಗೇಂದ್ರತಲ್ಪಮಧಿ-ರೋಪಯ ತತ್ಪದಾಬ್ಜರಾಗೇಣ ರಂಜಯ ಕಲಿಂ ಜಯ ತದ್ವಿವಿಕ್ಷುಮ್||”** ಎಂದು ಮನಸ್ಸಿನಲ್ಲಿ ನಡೆಯಬೇಕಾದ

---

[1] ಈ ವಿಷಯಕ್ಕೆ ಪ್ರಮಾಣವಾದ ಶ್ರೀಸೋದೆಮಠದಿಂದ ಪ್ರಕಾಶಿತವಾದ **ಸವ್ಯಾಖ್ಯಾ ಭಾವೀಸಮೀರಶ್ರೀಮದ್ವಾದಿರಾಜ-ಪೂಜ್ಯಚರಣವಿರಚಿತತೀರ್ಥಪ್ರಬಂಧಃ** ಎಂಬ ಗ್ರಂಥದ ಚಿತ್ರವನ್ನು ಕೊನೆಯಲ್ಲಿ ಕೊಡಲಾಗಿದೆ **(ಚಿತ್ರ 1)**.

ಅನುಸಂಧಾನಕ್ಕೆ ಅಡ್ಡಿಯನ್ನುಂಟು ಮಾಡಲು ನನ್ನ ಮನಸ್ಸೆಂಬ ಮನೆಯನ್ನು ಪ್ರವೇಶಿಸಲಿಚ್ಛಿಸುವ ಕಲಿಯನ್ನು ನಿಗ್ರಹಿಸಿ ತಮ್ಮ ದಯಾತೋಯದಿಂದ ಶುದ್ಧೀಕರಿಸಿ ಭಗವಂತನ ಪಾದಪದ್ಮರತಿಯಿಂದ ಅಲಂಕರಿಸಿ ಭಗವಂತನನ್ನು ಕುಳ್ಳಿರಿಸಿ ಅನುಗ್ರಹಿಸಿರೆಂದು ಪ್ರಾರ್ಥಿಸುತ್ತಾರೆ[2]. ಅಂತೆಯೇ **"ತೀರ್ಥಕ್ಷೇತ್ರತದೀಶಾನಾಂ ಮಾಹಾತ್ಮ್ಯಾನಿ ಯಥಾಮತಿ| ವಾದಿರಾಜೋ ಯತಿಃ ಸ್ತೌತಿ ಪದ್ಯೈಃ ಕತಿಪಯೈಃ ಕವಿಃ||"** ಎಂದು "**ಯಥಾಮತಿ**" ಎಂಬ ಪದಪ್ರಯೋಗದ ಮೂಲಕ ಈ ತೀರ್ಥಪ್ರಬಂಧವು ದೈಹಿಕಯಾತ್ರೆಯಾಗದೆ ಕೇವಲ ಮಾನಸಿಕಚಿಂತನೆಯ ಫಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಅನೇಕ ಸಮಸ್ಯೆ-ಗಳು ನಿರಸ್ತವಾಗುವುವು. ಅದರಲ್ಲಿ ಕೆಲವು ಭಗವದ್ರೂಪಗಳ, ದೇವತೆಗಳ, ತೀರ್ಥಗಳ ವರ್ಣನೆಯನ್ನು ಮಾಡದಿರುವ ನ್ಯೂನತಾಶಂಕಾ, ಪ್ರತಿಜ್ಞಾಭಂಗ ಇತ್ಯಾದಿ.

ಇದಕ್ಕೆ ಕೆಲವು ದೃಷ್ಟಾಂತಗಳನ್ನು ಅವಲೋಕಿಸೋಣ. ಪ್ರಾರಂಭದ ಪಶ್ಚಿಮಪ್ರಬಂಧದಲ್ಲಿ ಮೊದಲ ವರ್ಣನೆಯು ಉಡುಪಿಕ್ಷೇತ್ರಕ್ಕೆ ಸಂಬಂಧಿಸಿದ್ದು ಅದರಲ್ಲಿ **'ಕಾಶೀತಲೇ..'** ಎಂದಾರಂಭವಾಗುವ ಏಳನೆಯ ಶ್ಲೋಕದಿಂದ ಶ್ರೀಮಧ್ವಸರೋವರವನ್ನು ಸ್ತುತಿಸಿ, **'ಯಸ್ಮಿನ್ ವಾಗ್ವಜ್ರಧಾರಾ....'** ಎಂಬ ಎಂಟನೆಯ ಶ್ಲೋಕದಿಂದ ಉಡುಪಿಶ್ರೀಕೃಷ್ಣಪಾದಪದ್ಮಾರಾಧಕರಾದ ಅಷ್ಟಮಠಾಧೀಶರ ಹಿರಿಮೆಗರಿಮೆಗಳನ್ನು ವರ್ಣಿಸಿ, **'ದ್ವಾರಾವತೀಂ...'** ಎಂಬ ಶ್ಲೋಕವನ್ನಾರಂಭಿಸಿ **'ರೂಪ್ಯಾತ್ಮಕಾಮರಪುರಃ...'** ಎಂಬ ಶ್ಲೋಕದವರೆಗೆ ಐದುಶ್ಲೋಕಗಳಿಂದ ಉಡುಪಿಕ್ಷೇತ್ರದ ಶ್ರೀಕೃಷ್ಣದೇವರನ್ನು ಸ್ತುತಿಸಿ ಪ್ರಾರ್ಥಿಸಿ **'ಶಿವಾಂತರ್ಯಾಮಿತಾಂ...'** ಎಂಬ ಶ್ಲೋಕ ಹಾಗೂ **'ಈಶಸ್ಯಾಹೀಶಪದವೀಂ'** ಎಂಬ ಶ್ಲೋಕಗಳೆರಡರಿಂದ ರಜತಪೀಠಪುರದ ಶ್ರೀಮದನಂತಾಸನ-ದೇವರನ್ನು ಸ್ತುತಿಸುತ್ತಾರೆ. ಆದರೆ ಆ ಶ್ರೀಮದನಂತಾಸನದೇವರ ಸೇವೆಯ ಫಲವಾಗಿ ಆ ಪರಬ್ರಹ್ಮನನ್ನೇ ಪ್ರಣಮಿಸಿ ಪಾಜಕಕ್ಷೇತ್ರದಲ್ಲಿ ಅವತರಿಸಿದ, ವಿಶೇಷವಾಗಿ ಶ್ರೀಅನಂತಾಸನದೇವಸ್ಥಾನವನ್ನೇ ತಮ್ಮ ಸಕಲ-ಸಚ್ಛಾಸ್ತ್ರಪಾಠಪ್ರವಚನಗಳ, ಧ್ಯಾನೋಪಾಸನಾ-ದಿಗಳ ಕೇಂದ್ರವನ್ನಾಗಿಸಿಕೊಂಡು ದೇವತಾಪುಷ್ಪವೃಷ್ಟಿಯನ್ನು ಸ್ವೀಕರಿಸಿ ಅದೃಶ್ಯರಾಗಿಯೇ ನಿತ್ಯ ಸನ್ನಿಹಿತರಾದ ಶ್ರೀಮದಾಚಾರ್ಯರ ದಿವ್ಯಸನ್ನಿಧಿಯನ್ನು ಅಂದರೆ ಶ್ರೀಮದನಂತೇಶ್ವರದೇವಸ್ಥಾನದಲ್ಲಿರುವ ಶ್ರೀಮದಾಚಾರ್ಯರ ಅದೃಶ್ಯಸನ್ನಿಧಿಯನ್ನು ವರ್ಣಿಸಿಲ್ಲ. ಅಂತೆಯೇ ಶ್ರೀಕೃಷ್ಣಮಠದಲ್ಲಿ ಸನ್ನಿಹಿತರಾದ ಚಂದ್ರಶಾಲೆಯ ಶ್ರೀಮುಖ್ಯಪ್ರಾಣದೇವರ, ಶ್ರೀಗರುಡದೇವರ ಹಾಗೂ ಪೌರಾಣಿಕ ಹಿನ್ನೆಲೆಯಲ್ಲಿ ಉಡುಪಿಸುಕ್ಷೇತ್ರದಲ್ಲಿ ಸನ್ನಿಹಿತರಾದ ಶ್ರೀಚಂದ್ರಮೌಳೀಶ್ವರದೇವರ ಸ್ತುತಿಯು ಈ ಉಡುಪಿಕ್ಷೇತ್ರವರ್ಣನೆಯ ಸಂದರ್ಭದಲ್ಲಿ ಇಲ್ಲ. ಅಂದರೆ ಶ್ರೀಸೋದಾ ಗುರುರಾಜರು ತಾವೇ ಅಯೋಧ್ಯೆಯಿಂದ ತಂದು ಪ್ರತಿಷ್ಠಾಪಿಸಿದ ಚಂದ್ರಶಾಲೆಯ ಶ್ರೀಮುಖ್ಯಪ್ರಾಣದೇವರನ್ನು, ಶ್ರೀಗರುಡದೇವರನ್ನು ಸಂದರ್ಶಿಸಿ-ಸಲಿಲ್ಲವೇ? ಶ್ರೀಚಂದ್ರಮೌಳೀಶ್ವರದರ್ಶನಕ್ಕೆ ಹೋಗಿಲ್ಲವೇ? ಎಂಬ ಸಂಶಯವು ಬರುವುದು. ಉಡುಪಿಯ ಸತ್ಸಂಪ್ರದಾಯವನ್ನು ಸಂರಕ್ಷಿಸಿದ ಬೆಳೆಸಿದ ಶ್ರೀಸೋದಾ ಗುರುರಾಜರು ಹೀಗೆ ಶ್ರೀಕೃಷ್ಣದರ್ಶನದ ಬಳಿಕ

---

[2] ಈ ವಿಷಯಕ್ಕೂ ಪ್ರಮಾಣವಾದ ಶ್ರೀಸೋದೆಮಠದಿಂದ ಪ್ರಕಾಶಿತವಾದ **ಸವ್ಯಾಖ್ಯಾ ಭಾವೀಸಮೀರಶ್ರೀಮದ್ವಾದಿರಾಜ-ಪೂಜ್ಯಚರಣವಿರಚಿತತೀರ್ಥಪ್ರಬಂಧಃ** ಎಂಬ ಗ್ರಂಥದ ಚಿತ್ರವನ್ನು ಕೊನೆಯಲ್ಲಿ ಕೊಡಲಾಗಿದೆ **(ಚಿತ್ರ 2)**.

ಶ್ರೀಮುಖ್ಯಪ್ರಾಣದೇವರ ಶ್ರೀಗರುಡದೇವರ, ಸರ್ವಪರ್ಯಾಯಸಾಕ್ಷಿಗಳಾದ ಜ್ಞಾನಾಭಯಮುದ್ರರಾದ ಶ್ರೀಮದಾಚಾರ್ಯರನ್ನು ಸಂದರ್ಶಿಸದೇ ಶ್ರೀಚಂದ್ರಮೌಳೀಶ್ವರದೇವರನ್ನು ದರ್ಶಿಸದೇ ಇರಲು ಅಥವಾ ದರ್ಶಿಸಿದರೂ ಸ್ತುತಿಸದಿರಲು ಸಾಧ್ಯವೇ? ಶ್ರೀಮದಾಚಾರ್ಯರೇ ಪುಟ್ಟ ವಾಸುದೇವನಾಗಿದ್ದಾಗ ಮೊದಲು ಶ್ರೀಚಂದ್ರಮೌಳೀಶ್ವರ ದೇವಾಲಯಕ್ಕೆ ಹೋಗಿರುವುದರ ದಾಖಲೆಯನ್ನು ನಾವು ಶ್ರೀಸುಮಧ್ವವಿಜಯದಲ್ಲಿ **'...ಮಹೇಂದ್ರ ದಿಗಾಲಯಂ ಪ್ರಣತವಾನುತ ಯಾವದಧೀಶ್ವರಮ್'** ಎಂಬ ವಾಕ್ಯದಿಂದ ನೋಡುತ್ತೇವೆ. ಇಂದಿಗೂ ಸಾಂಪ್ರದಾಯಿಕ ಎಲ್ಲ ಸಂದರ್ಭದಲ್ಲೂ ಮೊದಲು ಶ್ರೀಚಂದ್ರಮೌಳೀಶ್ವರದೇವಸ್ಥಾನದ ಸಂದರ್ಶನ. ಅನಂತರ ಶ್ರೀಮದನಂತಾಸನದೇವಸ್ಥಾನಸಂದರ್ಶನ, ಬಳಿಕ ಶ್ರೀಕೃಷ್ಣಮಠದ ಸಂದರ್ಶನದ ಪದ್ಧತಿಯೇ ಇರುವುದು. ಈ ಹಿನ್ನೆಲೆಯಲ್ಲಿ ಶ್ರೀಮದಾಚಾರ್ಯಸತ್ಸಂಪ್ರದಾಯಪ್ರವರ್ಧಕರಾದ ಶ್ರೀಸೋದಾಗುರುರಾಜರು ಉಡುಪಿಯಲ್ಲಿ ಇದ್ದುಕೊಂಡೇ ಪ್ರಸ್ತುತ ಯಾತ್ರಾಮಾರ್ಗದರ್ಶಕಕೃತಿಯೆನಿಸಿದ ತೀರ್ಥಪ್ರಬಂಧದಲ್ಲಿ ಶ್ರೀಮಧ್ವ-ಸರೋವರಾದಿಗಳ ಪ್ರತ್ಯಕ್ಷಸಂದರ್ಶನವನ್ನು ಮಾಡಿ ಸ್ತುತಿಸಿದ್ದಲ್ಲಿ ಅಯೋಧ್ಯೆಯಿಂದ ಬಂದ ಚಂದ್ರಶಾಲೆಯ ಶ್ರೀಮುಖ್ಯಪ್ರಾಣದೇವರ, ಸಾಕ್ಷಿಶ್ರೀಮದಾಚಾರ್ಯರ ಸನ್ನಿಧಿ, ಶ್ರೀಗರುಡದೇವರ, ಶ್ರೀಚಂದ್ರೇಶ್ವರದೇವಾದಿ-ಸನ್ನಿಧಿಯನ್ನು ವರ್ಣಿಸದೇ ಇರಲಾರರು.

ಮತ್ತೊಂದು ವಿಚಿತ್ರವಾದ "ತೀರ್ಥಪ್ರಬಂಧದಲ್ಲಿ ಉಲ್ಲಿಖಿತವಾಗಿದ್ದರಿಂದ ಇದೆ, ಉಲ್ಲಿಖಿತವಾಗದ್ದರಿಂದ ಇಲ್ಲ" ಎಂಬ ಬಾಲಿಶ ಅನ್ವಯ-ವ್ಯತಿರೇಕವ್ಯಾಪ್ತಿಗಳ ವಾದವನ್ನೇ ಅನುಸರಿಸಿದರೆ ಪ್ರಸ್ತುತ ಶ್ರೀಕ್ಷೇತ್ರಉಡುಪಿಯ ಅನಂತಾಸನದೇವರ ದೇವಸ್ಥಾನದಲ್ಲಿ ಶ್ರೀಮದಾಚಾರ್ಯರ ಸನ್ನಿಧಿ ಇಲ್ಲವೆಂದೇ ಹೇಳಬೇಕಾದೀತು. ಇದು ಪ್ರಸ್ತುತ ಪರರ ಆಕ್ರಮಣಯತ್ನಕ್ಕೆ ಅನುವಾದೀತು. ಈ ಎಲ್ಲ ಹಿನ್ನೆಲೆಯಲ್ಲಿ ಶ್ರೀಗುರುರಾಜರ ಈ ರಚನೆ ಉಡುಪಿಯಲ್ಲಿದ್ದು ಮಾಡಲ್ಪಟ್ಟದ್ದಲ್ಲವೆಂಬುದು ಸ್ಪಷ್ಟವಾಗುವುದು. ಶ್ರೀಎಲ್ಲೂರು ವಿಶ್ವನಾಥದೇವರನ್ನು ಸುಂದರವಾದ ಐದುಶ್ಲೋಕಗಳಿಂದ ಸ್ತುತಿಸಿ ನಮಿಸಿ ಅಲ್ಲಿಯೇ ಇರುವ ಶ್ರೀನಂದಿಕೇಶ್ವರನನ್ನೂ ಬಣ್ಣಿಸಿರುವ ಶ್ರೀಸೋದಾಗುರುರಾಜರು ತಮ್ಮದೇ ಕಾರ್ಯಕ್ಷೇತ್ರವೆನಿಸಿದ ಉಡುಪಿಯಲ್ಲಿ ಶ್ರೀಮುಖ್ಯಪ್ರಾಣದೇವರನ್ನು, ಶ್ರೀಮದಾಚಾರ್ಯರನ್ನು ಶ್ರೀಗರುಡದೇವರನ್ನು, ಚಂದ್ರಮೌಳೀಶ್ವರಾದಿ-ದೇವರನ್ನು ಮಾತ್ರ ಸ್ತುತಿಸದೇ ಇರುವುದಕ್ಕೆ ಕಾರಣವಿಲ್ಲ. ಒಂದು ವೇಳೆ ತೀರ್ಥಪ್ರಬಂಧದಲ್ಲಿರುವ ಶ್ಲೋಕಗಳು ಪ್ರತ್ಯಕ್ಷವಾಗಿ ದರ್ಶನಕಾಲದಲ್ಲೇ ರಚಿತವೆನ್ನುವುದಾದರೆ **"ತೀರ್ಥಕ್ಷೇತ್ರ ತದೀಶಾನಾಂ ಮಾಹಾತ್ಮ್ಯಾನಿ ಯಥಾಮತಿ| ವಾದಿರಾಜೋ ಯತಿಃ ಸ್ತೌತಿ ಪದ್ಯೈಃ ಕತಿಪಯೈಃ ಕವಿಃ||"** ಎಂಬ ಪ್ರತಿಜ್ಞೆಯ ಭಂಗವಾದೀತು ಅಲ್ಲವೇ? ಮತ್ತು ಶ್ರೀವಾದಿರಾಜ-ಗುರುವರಚರಿತಾಮೃತದಲ್ಲಿ ಶ್ರೀರಾಮಚಂದ್ರಾಚಾರ್ಯರು ಹೇಳಿದಂತೆ **"ಸ್ವದೃಷ್ಟಕ್ಷೇತ್ರತೀರ್ಥಾದಿಮಾಹಾತ್ಮ್ಯ-ಸ್ಯಾವಬೋಧಕಮ್। ತೀರ್ಥಪ್ರಬಂಧಂ ಕೃತವಾನ್ ಪಠತಾಮಘನಾಶನಮ್॥"** ಎಂಬ ವಾಕ್ಯದಿಂದ **"ತಾವು ನೋಡಿದ ತೀರ್ಥಕ್ಷೇತ್ರಗಳ ಮಾಹಾತ್ಮ್ಯೆಯನ್ನೇ ವರ್ಣಿಸುತ್ತಾರೆ"** ಎಂದು ತಿಳಿದರೆ ಪ್ರಸ್ತುತ <u>ಶ್ರೀಮದಾಚಾರ್ಯರ ಸ್ತುತಿಯೇ ತೀರ್ಥಪ್ರಬಂಧದಲ್ಲಿ ಇಲ್ಲದಿರುವುದಕ್ಕೆ</u> **"ಶ್ರೀಮದಾಚಾರ್ಯರು ದೃಷ್ಟರಾಗಿಲ್ಲ"** ಎಂದು ಭಾವಿಸಬೇಕೇ? ಭಕ್ತರ ತೀರ್ಥಯಾತ್ರಾಪ್ರವಾಸಮಾರ್ಗದರ್ಶಕಕೃತಿಯಾದ ಈ ಕೃತಿಯಲ್ಲಿ ಅತ್ಯಗತ್ಯ ಹಾಗೂ ಅನಿವಾರ್ಯವೂ

ಆದ ಪ್ರಧಾನಸನ್ನಿಧಾನಗಳ ನಿರೂಪಣೆಯ ಅದರ್ಶನವು ಈ ಗ್ರಂಥಕ್ಕೆ ನ್ಯೂನತೆಯನ್ನು ತಂದುಕೊಡುವುದಿಲ್ಲವೇ. ಶ್ರೀ ಸೋದಾಗುರುರಾಜರು ಭಕ್ತರಿಗಾಗಿ ರಚಿಸಿ ನೀಡಿದ ಈ ಕೃತಿಯು ದುಷ್ಟವಾಗಲು ಸಾಧ್ಯವಿಲ್ಲ ಹಾಗೂ ನ್ಯೂನತಾದ್ಯಾಪನ್ನವೆಂಬುದನ್ನು ಹೇಳಿದ್ದನ್ನೂ ಸಹಿಸುವುದೂ ಸಾಧ್ಯವಿಲ್ಲ. ಆದರೆ ಈ ವಿಷಯದಲ್ಲಿ ಯಾವ ವ್ಯಾಖ್ಯಾನದಲ್ಲೂ ಸ್ಪಷ್ಟೀಕರಣ ಅಥವಾ ಪರಿಹಾರವಿಲ್ಲ. ಇದ್ದಲ್ಲಿ ಖಂಡಿತವಾಗಿ ಸ್ವೀಕಾರಾರ್ಹ. ಆದರೆ ಓದುಗಸಾಧಕನು ಶ್ರೀಸೋದಾ ಗುರುರಾಜರ ಯಾವುದೇ ಕೃತಿಯಲ್ಲಿ ಯಾವುದೇ ರೀತಿಯ ದೋಷಗಳಿಗೆ ಖಂಡಿತವಾಗಿಯೂ ಅವಕಾಶವಿರುವುದಿಲ್ಲವೆಂಬುದನ್ನು ಅಂದರೆ ಶ್ರೀಸೋದಾ-ಗುರುರಾಜರ ಕೃತಿಗಳು ನಿರ್ದುಷ್ಟವೆಂದು ಈ ಸಂದರ್ಭದಲ್ಲಿ ಸ್ಪಷ್ಟಮಾಡಿಕೊಳ್ಳಬೇಕು. [ಪ್ರಸ್ತುತ ಸಂದೇಹಗಳು ಕೇವಲ ಊಹಾಪೋಹಗಳ ಅಥವಾ ಭ್ರಮಾತ್ಮಕ ಆಭಿಮಾನಿಕ ಪ್ರವೃತ್ತಿಗಳಿಂದ ಪರಿಹೃತ-ವಾಗುವುದಿಲ್ಲ] ಆದ್ದರಿಂದ ಶ್ರೀಸೋದಾಗುರುರಾಜರು ಬೇರೇ ಸ್ಥಳದಲ್ಲಿದ್ದಾಗಲೇ ಈ ಕೃತಿಯನ್ನು ರಚಿಸಿದ್ದಾರೆಂದು ಸ್ಪಷ್ಟವಾಗುತ್ತದೆ. ಬೇರೆ ಸ್ಥಳದಲ್ಲಿದ್ದಾಗ ಕೇವಲ ಸ್ಮರಣಪೂರ್ವಕ ಚಿಂತನೆಯಲ್ಲಿ ಕೃತಿಯು ಮೂಡಿಬರುವುದರಿಂದ **'ಸ್ಮೃತಸ್ಯ ಉಪೇಕ್ಷಾಽನಾರ್ಹತ್ವಮ್'** ಎಂಬ ಶಾಸ್ತ್ರೀಯನಿಯಮಕ್ಕನುಗುಣವಾಗಿ ಮನಸ್ಸಲ್ಲಿ ಮೂಡಿದ ಚಿಂತನೆಗಳ ಫಲವಾಗಿ ಕೆಲವೇ ಕೆಲವು ಕ್ಷೇತ್ರಾದಿಗಳ ಸ್ತುತಿ ಮೂಡಿಬಂದಿದೆ. ಈ ರೀತಿಯ ಸಂದರ್ಭದಲ್ಲಿ ಶ್ರೀಮುಖ್ಯಪ್ರಾಣದೇವರ ಶ್ರೀಮದಾಚಾರ್ಯರ, ಶ್ರೀಗರುಡದೇವರ, ಶ್ರೀಚಂದ್ರೇಶ್ವ-ರಾದಿದೇವರ ಸ್ತೋತ್ರವು ಏಕೆ ಇಲ್ಲ ಎಂಬ ಪ್ರಶ್ನೆಗೆ ಉತ್ತರವೂ ಸಹಜವಾಗಿದೆ. ಯಾವುದು ನೆನಪಲ್ಲಿ ಮೂಡುವುದೋ ಅದು ಮಾತ್ರ ಸ್ತುತಿಕೃತಿಗೆ ವಿಷಯವಾಗುವುದು. ಸ್ಮೃತಿಗೆ ವಿಷಯವಾಗದೇ ಇರುವದನ್ನು ಏಕೆ ಸ್ತುತಿಸಿಲ್ಲ? ಅದರ ಕೃತಿರಚನೆಯನ್ನು ಏಕೆ ಮಾಡಲಿಲ್ಲ? ಎಂಬ ಪ್ರಶ್ನೆಗೆಳಿಗೆ ಅವಕಾಶವಿಲ್ಲ. ಈ ಹಿನ್ನೆಲೆ-ಯಲ್ಲಿಯೇ ಶ್ರೀಸೋದಾ ಗುರುರಾಜರು ಪ್ರಾರಂಭದಲ್ಲೇ "**ಯಥಾಮತಿ**" ಎಂಬ ಪದವನ್ನು ಪ್ರಯೋಗಿಸಿ ತಮ್ಮ ಕೃತಿಕರ್ತೃ ಪ್ರಾಮಾಣಿಕತ್ವವನ್ನು ಸ್ಪಷ್ಟಪಡಿಸಿ ಎಲ್ಲರಿಗೂ ಮಾರ್ಗದರ್ಶನವನ್ನು ಮಾಡಿದ್ದಾರೆ.

ಗೌತಮಕ್ಷೇತ್ರ ಹಾಗೂ ಕುಂಭಾಸಿಕ್ಷೇತ್ರಗಳನ್ನು ವರ್ಣಿಸುವಾಗ ಶ್ರೀಹರಿಹರರನ್ನು ಪ್ರತ್ಯಕ್ಷವಾಗಿಯೇ ದರ್ಶಿಸಿ ವರ್ಣಿಸುತ್ತಾರೆ ಎಂದೇ ಹೇಳುವುದಾದರೆ ಅಲ್ಲಿಯೇ ಬೆಟ್ಟದಲ್ಲಿ ಸನ್ನಿಹಿತರಾದ ಶ್ರೀವಿಶ್ವಂಭರೋಪಾಸಕ-ಗಣಪತಿ ದೇವರನ್ನು ದರ್ಶಿಸಿ ಸ್ತುತಿಸದೇ ಇರಲು ಕಾರಣವೇನು? ಎಂಬ ಪ್ರಶ್ನೆಯೂ ಹಾಗೆಯೇ ಉಳಿಯುತ್ತದೆ. ಆದರೆ ಮಾನಸಿಕ ಯಾತ್ರಾಚಿಂತನೆ ಸ್ತುತಿರಚನೆಗಳ ಹಿನ್ನೆಲೆಯಲ್ಲಿ ಮಾತ್ರ ಈ ಶಂಕೆಗಳಿಗವಕಾಶವಿಲ್ಲ. ಅದಕ್ಕೆಂದೇ ಶ್ರೀಸೋದಾಗುರುರಾಜರ ಮಾತು "**ಯಥಾಮತಿ**" ಎಂದು.

ಪ್ರಧಾನವಾಗಿ ನಾವು ಅವಲೋಕಿಸಬೇಕಾದ ಸಂಗತಿಯೇನೆಂದರೆ ಶ್ರೀಸೋದಾ-ಗುರುರಾಜರು ಪುರಾಣಪ್ರಸಿದ್ಧವಾದ ತಿರುಮಲಕ್ಷೇತ್ರದ ಯಾತ್ರೆಯನ್ನು ಸ್ವಾಮಿಪುಷ್ಕರಣೀಸ್ನಾನ, ಸ್ವಯಂವ್ಯಕ್ತ-ಭಗವದ್ದರ್ಶನ, ಭಜನೆ ಮೊದಲಾದವುಗಳಿಂದ ಭಗವದುಪಾಸನೆಯನ್ನು ಮಾಡಿರುವುದು ಸರ್ವವಿದಿತ. ಶಾಲಗ್ರಾಮಹಾರವನ್ನು ಪರಬ್ರಹ್ಮ ಶ್ರೀಶ್ರೀನಿವಾಸದೇವರಿಗೆ ಸಮರ್ಪಿಸಿರುವುದು ಇಂದಿಗೂ ಸ್ಪಷ್ಟವಾದ ವಿಷಯ. ಆದರೆ ಈ ತೀರ್ಥಪ್ರಬಂಧದ ರಚನೆಯ ಸಂದರ್ಭದಲ್ಲಿ ಅವರು ತಾವು ದೈಹಿಕವಾಗಿ ಪ್ರತ್ಯಕ್ಷವಾಗಿ

ತಿರುಮಲೆಗೆ ಬರದೇ ತಾವು ಇರುವಲ್ಲೇ ಪರಬಹ್ಮ ಶ್ರೀಶ್ರೀನಿವಾಸದೇವರನ್ನು ಸ್ತುತಿಸಿ ಪ್ರಾರ್ಥಿಸಿ ಶರಣಾಗತ-ರಾಗಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಪ್ರಾಯಃ ಸಮಗ್ರ ತೀರ್ಥಪ್ರಬಂಧದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಹನ್ನೊಂದು ಶ್ಲೋಕಗಳಿಂದ ಪರಬ್ರಹ್ಮ-ಶ್ರೀನಿವಾಸನನ್ನು ಮನಸಾರೆ ಸ್ತುತಿಸುವ ಪ್ರಾರ್ಥಿಸುವ ಶ್ರೀಮದ್ವಾದಿರಾಜಗುರುಸಾರ್ವಭೌಮರು ಆ ತಿರುಮಲದಲ್ಲಿಯೇ ಸನ್ನಿಹಿತರಾದ ಕ್ಷೇತ್ರೇಶರಾದ ಶ್ರೀಭೂವರಾಹ-ದೇವರನ್ನು ಕನಿಷ್ಠ ಒಂದು ಶ್ಲೋಕದಿಂದಲೂ ಸ್ತುತಿಸದೇ ಇರಲು ಕಾರಣವೇನು? ತಿರುಮಲ ಕ್ಷೇತ್ರದ ನಿಯಮದಂತೆ ಮೊದಲ ದರ್ಶನ, ನಮನ, ಸ್ತವನಾದಿಗಳು ಶ್ರೀವರಾಹದೇವರಿಗೆ ಸಲ್ಲಬೇಕು ಎಂಬ ಪದ್ಧತಿಯಿದ್ದಾಗಲೂ ಶ್ರೀವರಾಹದೇವರ ಸ್ತುತಿಯಿಲ್ಲದಿರಲು ಕಾರಣವೇನು? **ಇನ್ನೂ ಮಿಗಿಲಾಗಿ ಶ್ರೀಮದಾಚಾರ್ಯರು ತಮ್ಮ ಪ್ರಿಯಶಿಷ್ಯವರ್ಯರಾದ ಹಾಗೂ ಪೂರ್ವಾಶ್ರಮದನುಜರಾದ ಶ್ರೀ ಶ್ರೀವಿಷ್ಣುತೀರ್ಥ-ಗುರುಸಾರ್ವಭೌಮರಿಗೆ ನೀಡಿ ಅನುಗ್ರಹಿಸಿದ ಉಪಾಸ್ಯಮೂರುತಿ ಶ್ರೀಸೋದೆಮಠದ ಪಟ್ಟದ ದೇವರು ಶ್ರೀಭೂವರಾಹದೇವರೇ ಆಗಿರುವಾಗ ತಿರುಮಲದಲ್ಲಿ ಸನ್ನಿಹಿತರಾದ ತಮ್ಮ ಪಟ್ಟದ ದೇವರೆಂಬ ವಿಶೇಷವಾದ ಶ್ರದ್ಧೆಯಿಂದಲಾದರೂ ಸ್ತುತಿಸದಿರಲು ಕಾರಣವೇನು?** ಆ ಪರಬ್ರಹ್ಮನ ಶ್ರೀವರಾಹವೇಂಕಟೇಶ್ವರ ರೂಪದ್ವಯ ಸನ್ನಿಧಿಗಳ ಮಧ್ಯದಲ್ಲಿ ಕಂಗೊಳಿಸುವ ಪುರಾಣಪ್ರಸಿದ್ಧವಾದ ಸ್ವಾಮಿಪುಷ್ಕರಣಿಯನ್ನು ಸ್ತುತಿಸದಿರಲು ಕಾರಣವೇನು? ತಿರುಪತಿಯ ಸುವರ್ಣಮುಖಿ ನದಿಯನ್ನು ಸ್ತುತಿಸುವ ಶ್ರೀಗುರುರಾಜರು ಸ್ವಾಮಿಪುಷ್ಕರಣಿಯನ್ನು ವರ್ಣಿಸದಿರಲು ಕಾರಣವೇನು? ಇದೆಲ್ಲ ಪ್ರಶ್ನೆಗಳು ಪ್ರತ್ಯಕ್ಷವಾಗಿ ಕಾಣುತ್ತಲೇ ಕ್ಷೇತ್ರಸಂದರ್ಶನ, ತೀರ್ಥಸ್ನಾನ, ದೇವೇಶ-ದೇವತಾ ಸ್ತವನಾದಿಗಳನ್ನು ಮಾಡಿದ್ದಾರೆಂದು ಹೇಳಿದಾಗ ಮಾತ್ರ ಕಾಡುವುವು. ಆದರೆ ಶ್ರೀಸೋದಾಗುರುರಾಜರು ತಾವು ಇರುವಲ್ಲೇ ಮಾನಸಿಕವಾಗಿ ತೀರ್ಥಕ್ಷೇತ್ರತದೀಶಾನರನ್ನು ಸ್ಮರಿಸುತ್ತಲೇ ಸ್ತುತಿಸಿದ್ದಾರೆ ಎಂದಾಗ ಈ ಪ್ರಶ್ನೆಗಳಿಗೆ ಅವಕಾಶವಿಲ್ಲ. ಸ್ಮೃತಿಪಟಲದಲ್ಲಿ ಗೋಚರಿಸುವುದು ಮಾತ್ರ ಕೃತಿಗೆ ವಿಷಯವಾಗುವುದು ಎಂಬುದು ಸರ್ವವಿದಿತ. ಅದಕ್ಕೆಂದೇ ಶ್ರೀಸೋದಾ ಗುರುರಾಜರು ಪ್ರಾರಂಭದಲ್ಲಿ ಪ್ರತಿಜ್ಞೆಯನ್ನು ಮಾಡಿದ್ದು "**ಯಥಾಮತಿ**"ಎಂದು[3]. ಅಂತೆಯೇ ಆರಂಭದಲ್ಲಿ "**ಕವಿಃ**" ಎಂದೂ ಹೇಳಿರುವುದರಿಂದ ಭಕ್ತಿಭಾವನೆಗಳಿಗೆ ಆಕರರಾಗಿ ಅವುಗಳ ಪ್ರವಾಹದಲ್ಲಿ ತಮ್ಮ ಕೃತಿಯು ಮೂಡಲಿದೆ ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ. ಅದಕ್ಕೊಂದು ಸುಂದರ ಉದಾಹರಣೆ - ಹನ್ನೊಂದು ಶ್ಲೋಕಗಳಿಂದ ಶ್ರೀಶ್ರೀನಿವಾಸ-ಪರಬ್ರಹ್ಮನ ಸ್ತೋತ್ರ. ಅಷ್ಟು ಶ್ಲೋಕಗಳಿಂದ ಸ್ತುತಿಸಿದರೂ ತೃಪ್ತರಾಗದ ಶ್ರೀ ಗುರುರಾಜರು ಕೊನೆಯಲ್ಲಿ **"ಆನಂದತೀರ್ಥವರದೇ ದಾನವಾರಣ್ಯಪಾವಕೇ | ಜ್ಞಾನದಾಯಿನಿ ಸರ್ವೇಶೇ ಶ್ರೀಶ್ರೀನಿವಾಸೇಽಸ್ತು ಮೇ ಮನಃ||"** ಎಂದು ಪ್ರಾರ್ಥಿಸುತ್ತಾ ತಲ್ಲೀನರಾಗುತ್ತಾರೆ. ಈ ಪ್ರಕರಣವು ಮಾನಸಿಕಚಿಂತನೆಯ ಹಿನ್ನೆಲೆಯಲ್ಲಿಯೇ ತೀರ್ಥಪ್ರಬಂಧ ಗ್ರಂಥದ ರಚನೆಯೆಂಬುದನ್ನು ಸ್ಪಷ್ಟಪಡಿಸುವುದು.

---

[3] ಈ ವಿಷಯಕ್ಕೂ ಪ್ರಮಾಣವಾದ ಶ್ರೀಸೋದೆಮಠದಿಂದ ಪ್ರಕಾಶಿತವಾದ **ಸವ್ಯಾಖ್ಯಾ ಭಾವೀಸಮೀರಶ್ರೀಮದ್ವಾದಿರಾಜ-ಪೂಜ್ಯಚರಣವಿರಚಿತತೀರ್ಥಪ್ರಬಂಧಃ** ಎಂಬ ಗ್ರಂಥದ ಚಿತ್ರವನ್ನು ಕೊನೆಯಲ್ಲಿ ಕೊಡಲಾಗಿದೆ **(ಚಿತ್ರ 3)**.

ಅಂತೆಯೇ ದಕ್ಷಿಣಪ್ರಬಂಧದ ಶ್ರೀರಂಗಕ್ಷೇತ್ರದಲ್ಲಿ ಶ್ರೀರಂಗನಾಥನನ್ನು ಏಳು ಶ್ಲೋಕಗಳಿಂದ ಸ್ತುತಿಸಿ, ಒಂದು ಶ್ಲೋಕದಿಂದ ಶೇಷದೇವರನ್ನೂ ಸ್ತುತಿಸಿ, ಒಂದು ಶ್ಲೋಕದಿಂದ ಚಂದ್ರಪುಷ್ಕರಣಿಯನ್ನೂ ಸ್ತುತಿಸಿ, ಮತ್ತೆರಡು ಶ್ಲೋಕಗಳಿಂದ ಕಾವೇರಿಯನ್ನೂ ಸ್ತುತಿಸುವ ಶ್ರೀಗುರುರಾಜರು ಸ್ವಯಂವ್ಯಕ್ತನಾದ ಶ್ರೀ ಪರವಾಸುದೇವನನ್ನು ಹಾಗೂ ವಿಮಾನರಂಗಮಂದಿರವನ್ನೂ ಸ್ತುತಿಸದಿರಲು ಕಾರಣವೇನು? **"ಪರವಾಸುದೇವನ ನೋಡದ ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ"** ಎಂಬ ಶ್ರೀಶ್ರೀಪಾದರಾಜರ ಕೃತಿಯಂತಿರುವ ಅನೇಕ ಪ್ರಮಾಣಗಳಿಗೆ ವಿರುದ್ಧವಾಗಿ ವಿಮಾನರಂಗ-ಪರವಾಸುದೇವದರ್ಶನವನ್ನು ಮಾಡದೇ ಶ್ರೀಗುರುರಾಜರು ನಡೆಯಲು ಸಾಧ್ಯವೇ? ದರ್ಶಿಸಿದ್ದರೂ ಸ್ತುತಿಸದಿರಲು ಕಾರಣವೇನು? ಈ ರೀತಿಯ ಪ್ರಶ್ನೆಗಳು ತೋರುವುದು "ತೀರ್ಥಕ್ಷೇತ್ರಗಳನ್ನು ಕಣ್ಣಾರೆ ಕಾಣುತ್ತಲೇ ಸ್ತುತಿಸಿದ್ದು" ಎಂಬ ಅಭಿಪ್ರಾಯದಲ್ಲಿ ಮಾತ್ರ. ಮಾನಸಿಕ ಚಿಂತನೆಯ ಫಲವೇ ತೀರ್ಥಪ್ರಬಂಧಕೃತಿರಚನೆಯೆಂಬ ಅಭಿಪ್ರಾಯದಲ್ಲಿ ಈ ಗೊಂದಲಗಳಿಲ್ಲ. ಇದಕ್ಕೆ ಸೂಚಕವೇ **ಯಥಾಮತಿ** ಎಂಬ ಪದಪ್ರಯೋಗ.

ಹೀಗೆ ಅನೇಕ ದೃಷ್ಟಾಂತಗಳನ್ನು ಓದುಗಸಾಧಕರು ಗಮನಿಸಬಹುದು. ಪ್ರಧಾನವಾಗಿ ಈ ಕೃತಿಯರಚನೆ ಹಾಗೂ ಸಮರ್ಪಣೆಯ ಸಮಯವನ್ನು ಹಾಗೂ ಶ್ರೀಸೋದಾಗುರುರಾಜರ ವಯೋಮಾನವನ್ನೂ ಸ್ಪಷ್ಟಮಾಡಿಕೊಳ್ಳಲು ಒಂದು ಶ್ಲೋಕವನ್ನು ನೋಡೋಣ **"ತ್ರಿವಿಕ್ರಮಂ ರಮ್ಯಗದಾರಿಶಂಖಸರೋಜಮಾಲಾ-ಧರಮಿಂದುವರ್ಣಮ್| ಮನೋಹರಾಂಗಂ ಯತಿವಾದಿರಾಜಪ್ರತಿಷ್ಠಿತಂ ನೌಮಿ ಸದಾ ಪ್ರಸನ್ನಮ್ ||"** ಎಂಬ ಮಾತಲ್ಲಿ **"ಮನೋಹರವಾದ ಗದೆ, ಚಕ್ರ, ಶಂಖ ಮತ್ತು ಪದ್ಮಮಾಲೆಗಳನ್ನು ಕರಗಳಲ್ಲಿ ಧರಿಸಿರುವ ಚಂದ್ರವರ್ಣನಾದ ಸುಂದರಾಂಗನಾದ ಭಕ್ತವತ್ಸಲನಾದ ವಾದಿರಾಜಯತಿಗಳಿಂದ ಪ್ರತಿಷ್ಠಿತನಾದ ಸುಪ್ರಸನ್ನ-ನಾದ ತ್ರಿವಿಕ್ರಮನನ್ನು ನಮಿಸುವೆನು"** ಎಂದು ಸುಂದರವಾಗಿ ವರ್ಣಿಸಿದ್ದನ್ನು, ನಮನವನ್ನು ಅರ್ಪಿಸಿದ್ದನ್ನು ನೋಡಿದರೆ ಈ ತೀರ್ಥಪ್ರಬಂಧ ಶ್ರೀಸೋದಾಗುರುರಾಜರ ಪೂರ್ಣ ಇಳಿವಯಸ್ಸಿನಲ್ಲೇ ರಚಿತವಾಗಿದೆ ಎಂಬುದು ಸ್ಪಷ್ಟವಾಗುವುದು. ಹೇಗೆಂದರೆ, ಶ್ರೀತ್ರಿವಿಕ್ರಮದೇವರ ಪ್ರತಿಷ್ಠೆಯು ಶಾಲಿವಾಹನ ಶಕೆ **1504** ರ ಸಂವತ್ಸರದ ವೈಶಾಖ ಹುಣ್ಣಿಮೆಯಂದು ಅಂದರೆ ಇಂದಿನ ಪದ್ಧತಿಯಲ್ಲಿ **1582** ನೆಯ ಇಸವಿಯಲ್ಲಿ ನೆರವೇರಿದೆ ಎಂದು ಶಿಲಾಶಾಸನವು ಸ್ಪಷ್ಟಪಡಿಸುವುದು[4]. **ಶ್ರೀ ಗುರುರಾಜರ ಅವತಾರದ ಸಮಯವು 1480 ಎಂದು ಶ್ರೀಸೋದೆ ಮಠದ ದಾಖಲೆಯಿಂದ ವಿದಿತವಾದ ಹಿನ್ನೆಲೆಯಲ್ಲಿ ಶ್ರೀತ್ರಿವಿಕ್ರಮದೇವರ ಪ್ರತಿಷ್ಠೆಯ ಸಂದರ್ಭದಲ್ಲಿ ಶ್ರೀಸೋದಾ ಗುರುರಾಜರು 102 ವರ್ಷಗಳ ವೃದ್ಧರು ಎಂಬುದು ಸ್ಪಷ್ಟವಾಗುವುದು.**

ಅಷ್ಟೇ ಅಲ್ಲದೇ ಪ್ರಸ್ತುತ ವಿವಾದಕ್ಕೆಡೆಮಾಡಿ ಸಮಾಜಸೌಹಾರ್ದಸಾಧನೇಚ್ಛೆಗಳಿಗೆ ಮಾರಕವಾದ ಹಾಗೂ ಕ್ಷೋಭೆಗೆ ಕಾರಣವಾದ **"ಗಜಗಹ್ವರೇ ಜಯತೀರ್ಥಂ ವರ್ಣಯತಿ"** ಎಂಬ ಹಣೆಪಟ್ಟಿಯನ್ನು ಹೊತ್ತ

---

[4] ಈ ಶಾಸನದ ಕುರಿತಾದ ಮಾಹಿತಿಗಾಗಿ ಶ್ರೀಸೋದೆಮಠದಿಂದ ಪ್ರಕಾಶಿತವಾದ ಶ್ರೀಗುರುರಾಜಾಚಾರ್ಯ ನಿಪ್ಪಾಣಿಯವರ **"ಭಾವೀಸಮೀರಶ್ರೀವಾದಿರಾಜಗುರುರಾಜರು"** ಎಂಬ ಪುಸ್ತಕದ **ಪರಿಶಿಷ್ಟಗಳು-ಭಾಗ 3, 605ನೇ** ಪುಟದಲ್ಲಿ ಕಾಣಬಹುದು [ಇದನ್ನು ಚಿತ್ರ 4ರಲ್ಲಿ ನೋಡಬಹುದು].

ಹೊತ್ತಗೆಯಲ್ಲಿ ನೀಡಿದ ದಾಖಲೆಯನ್ನೇ ನೋಡಿದರೂ ಸ್ಪಷ್ಟತೆಗೆ ಇನ್ನಷ್ಟು ಪುಷ್ಟಿ ಲಭಿಸುವುದು. ಇನ್ನೂ ಅಚ್ಚರಿಯ ಸಂಗತಿಯೆಂದರೆ "**ತೀರ್ಥಪ್ರಬಂಧದ ರಚನೆ ಅರ್ಥಾತ್ ಪಶ್ಚಿಮಾದಿಪ್ರಬಂಧಾನುಸಾರಿಯಾದ ವರ್ಗೀಕೃತ ಕೃತಿಸ್ವರೂಪದ ನೀಡುವಿಕೆಯು 1591 ರಿಂದ 1596 ರವರೆಗಿನ ಅವಧಿಯಲ್ಲಿ ಕುಂಭಾಸಿ ಮಠದಲ್ಲಿ ಶ್ರೀಸೋದಾಗುರುರಾಜರಿಂದ ನಡೆಯಿತು**[5] [ತಮ್ಮ ಶಿಷ್ಯರಾದ ಶ್ರೀಶ್ರೀವೇದವೇದ್ಯತೀರ್ಥಶ್ರೀಪಾದರು, ಪ್ರಶಿಷ್ಯರಾದ ಶ್ರೀಶ್ರೀವೇದನಿಧಿತೀರ್ಥ-ಶ್ರೀಪಾದರು ಹಾಗೂ ಶ್ರೀಶ್ರೀವಿದ್ಯಾನಿಧಿತೀರ್ಥ ಶ್ರೀಪಾದರ ಜೊತೆಯಲ್ಲಿ ಇದ್ದಾಗ]" ಎಂಬ ದಾಖಲಾದ ವಿಷಯವೂ **ತೀರ್ಥಪ್ರಬಂಧರಚನೆಯ ಅವಧಿಯಲ್ಲಿ ಶ್ರೀಸೋದಾ-ಗುರುರಾಜರು ನೂರಾ ಹನ್ನೊಂದರಿಂದ ನೂರಾ ಹದಿನಾರು ವರ್ಷಗಳ ಇಳಿ ವಯಸ್ಸಲ್ಲಿದ್ದರೆಂಬುದನ್ನೂ ಸ್ಪಷ್ಟಪಡಿಸುವುದು**. ಶ್ರೀಸೋದಾಗುರುರಾಜರ ಸಶರೀರವೃಂದಾವನಪ್ರವೇಶವು **1600** ಅಥವಾ **1601** ಎಂದು ದಾಖಲೆಯನ್ನು ನೋಡಿದಾಗ ಶ್ರೀಸೋದಾಗುರುರಾಜರು ತಮ್ಮ ವೃಂದಾವನಪ್ರವೇಶಕ್ಕೆ ಐದಾರು ವರ್ಷಗಳ ಮುನ್ನವೇ ಈ ತೀರ್ಥಪ್ರಬಂಧವನ್ನು ರಚಿಸಿ ಭಕ್ತಶಿಷ್ಯಕೋಟಿಗೆ ಅನುಗ್ರಹಿಸಿದರೆಂದು ಸುಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಮಗ್ರತೀರ್ಥಪ್ರಬಂಧವನ್ನು ಅವಲೋಕಿಸಿದಾಗ ಉಪಸಂಹಾರದಲ್ಲಿ ಶ್ರೀಗುರುರಾಜರು "**ನಾನಾವೃತ್ತಂ ಸ್ವಯಾತ್ರಾಕ್ರಮಪರಿಚಿತಸುಕ್ಷೇತ್ರಮಾಹಾತ್ಮ್ಯಯುಕ್ತಂ ಶಬ್ದಾಲಂಕಾರಬದ್ಧಂ ಶಮಲಕುಲಹರಶ್ಲಾಘ್ಯನೀಯಾ-ರ್ಥಹೃದ್ಯಮ್। ಶ್ರೀನಾಥಪ್ರೀತಿಹೇತೋರ್ಹಯವದನಕೃಪಾಂಭೋಧಿಸಂಭೂತರತ್ನಂ ಚಕ್ರೇ ತೀರ್ಥಪ್ರಬಂಧಂ ಬಹುಗುಣಭರಿತಂ ವಾದಿರಾಜೋ ಯತೀಂದ್ರಃ॥**" ಎಂದು ಸೂಚಿಸಿದಂತೆ ತಾವು ಹಿಂದೆ ಅನೇಕ ಬಾರಿ ಮಾಡಿದ ಅಖಂಡ ಭಾರತದ ತೀರ್ಥಕ್ಷೇತ್ರಯಾತ್ರೆಗಳ ಅನುಭವದ ಫಲದಿಂದ ತಾವು ಇರುವಲ್ಲೇ ಆ ಕ್ಷಣದಲ್ಲಿ ತಮ್ಮ ಸ್ಮೃತಿಪಟಲಕ್ಕೆ ಬಂದಿರುವ ತೀರ್ಥಕ್ಷೇತ್ರತದೀಶರನ್ನು ಸ್ಮರಿಸಿ ಸ್ತುತಿಸಿ ಭಕ್ತರ ಉದ್ಧಾರಕ್ಕಾಗಿ ಸಾಧನೆಗಾಗಿ ಅತ್ಯುತ್ತಮ ಕೃತಿಯನ್ನಾಗಿ ಅನುಗ್ರಹಿಸಿದರು ಎಂದು ವಿದಿತವಾಗುತ್ತದೆ. ಈ ಹಿನ್ನೆಲೆಯ ಚಿಂತನೆಯಲ್ಲಿ ಪ್ರತ್ಯಕ್ಷ ಯಾತ್ರಾಸ್ತುತಿಯ ವಾದಕ್ಕಿರುವ ಬಾಧಕಗಳು ನ್ಯೂನತಾದಿಶಂಕೆಗಳಿಗೆ ಅವಕಾಶವಿಲ್ಲ.

ಫಲಿತಾರ್ಥ > ಆದ್ದರಿಂದ ಶ್ರೀಸೋದಾ ಗುರುರಾಜರು ಪಂಪಾಕ್ಷೇತ್ರದ ವರ್ಣನೆ ಸ್ತುತಿಯ ಬಳಿಕ ಪ್ರಾಚೀನಟೀಕಾಕಾರರಾದ ಪ್ರಾತಃಸ್ಮರಣೀಯರಾದ ಶ್ರೀಶ್ರೀಪದ್ಮನಾಭತೀರ್ಥಾದಿಗುರುವರೇಣ್ಯರಿಂದ ಭೂಷಿತ-ವಾದ ಗಜಗಹ್ವರವನ್ನು ಸ್ತುತಿಸಿ ಬಳಿಕ ಟೀಕಾಕಾರರೆಂದೇ ಪ್ರಖ್ಯಾತರಾದ ಶ್ರೀಶ್ರೀಮಟ್ಟೀಕಾಕೃತ್ಪಾದರನ್ನು ಸ್ಮರಿಸಿ ಸ್ತುತಿಸಿದ್ದಾರೆ ವಿನಹ ಗಜಗಹ್ವರದಲ್ಲಿ ಶ್ರೀಶ್ರೀಮಟ್ಟೀಕಾಕೃತ್ಪಾದರ ಬೃಂದಾವನವನ್ನು ಪ್ರತ್ಯಕ್ಷವಾಗಿ ಕಂಡು ಸ್ತುತಿಸಿದ್ದಲ್ಲವೆಂದು ಸುವೇದ್ಯವಾಗುವುದು.

ತಿಳಿದಿರಲೇಬೇಕಾದ ಮಹತ್ವಪೂರ್ಣ ವಿಷಯ > ಶ್ರೀಸೋದಾಗುರುರಾಜರ ತೀರ್ಥಪ್ರಬಂಧವು ಸರ್ವದಾ ನಿರ್ದುಷ್ಟ. ಆದ್ದರಿಂದಲೇ ಸಾಧನೆಗೆ ಅತ್ಯುತ್ತಮಸೋಪಾನ.

---

[5] ಈ ವಿಷಯವು ಶ್ರೀಪುಷ್ಕರಪ್ರಸಾದಾಚಾರ್ಯರ (ಇಂದಿನ ಶ್ರೀಶ್ರೀವಿದ್ಯಾವಿಜಯತೀರ್ಥರ) ಹಾಗೂ ಶ್ರೀ ನವಲಗುಂದರವರ ಕೃತಿಯ **355ನೇ ಪುಟದ**ಲ್ಲಿ ಕೋಷ್ಟಕರೂಪದಲ್ಲಿ ಕೊಡಲ್ಪಟ್ಟಿದೆ [ಚಿತ್ರ 5ನ್ನು ನೋಡಬಹುದು].

ವಿಶೇಷ ಸೂಚನೆ: ಈ ಲೇಖನವು ಉಪಕ್ರಮ. ಮುಂದೆ ಉಪಪಾದನೆ ಹಾಗೂ ಉಪಸಂಹಾರಗಳು ಹೊರಬರಲು ನಿರೀಕ್ಷೆಯಲ್ಲಿವೆ ಮತ್ತು ಈ ವಿಷಯದಲ್ಲಿ ಮುಕ್ತಚಿಂತನೆಗೆ ಸ್ವಾಗತವಿದೆ.

“ ಸರ್ವಸ್ವಂ ಮೇ ವಾದಿರಾಜೋ ದಯಾಲುಃ ”

16-04-2022 ಎನ್ ಗೋಪಾಲಕೃಷ್ಣ ರಾವ್

ರಾಜಾಜಿನಗರ, ಬೆಂಗಳೂರು

ಶ್ರೀಸೋದೆಮಠದಿಂದ ಪ್ರಕಾಶಿತವಾದ

ಸವ್ಯಾಖ್ಯಾ ಭಾವೀಸಮೀರಶ್ರೀಮದ್ವಾದಿರಾಜಪೂಜ್ಯಚರಣವಿರಚಿತತೀರ್ಥಪ್ರಬಂಧಃ

ಎಂಬ ಗ್ರಂಥದ ಚಿತ್ರಗಳು

(ಚಿತ್ರ 1)

मध्वागमागतज्ञाननिर्धूतान्यदुरागमम् ।
लक्ष्मीपतिं नुमस्तातं पक्षीशध्वजसंश्रयम् [१]* ॥४॥

वादिराजमुखाम्भोजनिस्सृता वाक्सरस्वती ।
हयग्रीवयशोगङ्गासङ्गाऽस्मान् पावयत्वलम् ॥५॥

वादिराजमुनीन्द्रेण रचितं सज्जनामृतम् ।
तीर्थप्रबन्धमद्वन्द्वं व्याकुर्वेऽहं यथामति ॥

वादिराजोक्तिचातुर्यमशक्यं ज्ञातुमञ्जसा ।
तथापि वक्ष्ये तच्छिक्षामनुसृत्यैव लेशतः ॥

अथानवरतवाजिवदनाराधनलब्धविद्यातिशयः कविकुलाग्रणीर्वादिराजमुनिः, स्वजन्ममहीमारभ्य स्वसञ्चरितसकलतीर्थक्षेत्रमहिमावलोकनेन समुल्लसितमनःप्रसादः, तन्महिमानुवर्णनलोलुपतया तीर्थक्षेत्रदेवस्तुत्यादिरूपप्रबन्धं चिकीर्षुः, प्रारीप्सितसकल[२]शुभकार्येषु श्रीमन्नारायणगुणानुस्मरणरूपमङ्गलं कर्तव्यमिति स्वान्तःकरणोपलक्षितसज्जनान् प्रत्युपदिशति – **हरीति** ॥ हे **मनः** त्वं स्वस्य[३] विष्णुभक्ततया स्वमनस्सदृशसकलविष्णुभक्तमनसां विहरणयोग्यत्वस्यापि लाभाय ग्रन्थस्य [४]साधिकारत्वसूचनाय चेयं सम्बुद्धिः । **भवघर्मरिपोः** भवः संसारः, स एव घर्मः निदाघः, तस्य रिपुः शत्रुः, तस्य ।


(ಚಿತ್ರ 2)

आ जन्मभूमेरटतोऽखिलेषु तीर्थेषु तद्वर्णनभारमूढ्वा ।
आयासमस्मन्मृदुमानसस्य वायुर्मुहुः कृन्ततु मध्वरूपी ।।३।।

जन्मभूमेः – जन्मनः उत्पत्तेः भूमिः = जन्मभूमिः, तस्याः जन्मभूमेः, आ आरभ्य । 'आङ् मर्यादाभिविध्योः'[१]रित्यत्र विभाषानुवृत्तेर्न[२] समासः । **अखिलेषु तीर्थेषु** अखिलानि समस्तानि तेषु अखिलेषु तीर्थेषु । **तद्वर्णनभारं** तेषां तीर्थानां, वर्णनं स्तुतिः, तस्मात् यो भारः आग्रहः, तम् । अतिबहुलप्रमेयवर्णने आग्रहस्याबोधादिना मध्ये मध्ये आयासहेतुत्वात् भार इत्युक्तम् । **ऊढ्वा** धृत्वा । "**अटतः** सञ्चरतः । क्रमेण तानि सर्वाणि तीर्थान्यनुचिन्तयत इत्यर्थः" । **अस्मन्मृदुमानसस्य** अस्माकं यन्मृदुमानसं कोमलचित्तम्, तस्य । 'स्वान्तं हृन्मानसं मनः'[३] इत्यमरः । भारासहिष्णुत्वादिद्योतनाय 'मृदु' इति विशेषणम् । स्तोतुमसमर्थमनस इत्यर्थः । **आयासम्** आयासः कथं स्तोतुं मम शक्तिर्भविष्यतीति चिन्तालक्षणखेदः, तम् । मध्व इति रूपं = मध्वरूपं, तदस्यास्तीति **मध्वरूपी** मध्वाचार्यात्मकः वायुः[४] । **मुहुः** पदे पदे । **कृन्ततु** च्छिन्द्यात् । भारतीपतित्वाज्ज्ञानबलपूर्णत्वाच्च स्तोतुं शक्तिं दत्वा चिन्तां परिहरत्वित्यर्थः । 'कृती छेदने' इति धातोः प्रार्थनायां लोट् । 'इदितो नुम् धातोः'[५] इति नुम् । यथा शिरसि[६]

देवतां वासुदेवं च विद्याभ्यासी तु सिद्धिभाक् । – इति तन्त्रसारसङ्ग्रहे ४-१०९

(ಚಿತ್ರ 3)



कविः । वादः एषामस्तीति = वादिनः, तेषां राजा = **वादिराजः** ।
'राजाहस्सखिभ्यष्टच्'[१] इति टच् वादिराजाख्यो **यतिः** परमहंसः, यद्वा यतत
इति यतिः । प्रबन्धकरणे प्रयत्नवान् इत्यर्थः । वादिराजाख्यकविरिति वा ।
तीर्थक्षेत्रतदीशानां तीर्थानि गङ्गादीनि, तानि च क्षेत्राणि श्रीरङ्गादीनि
तानि, तेषां, तीर्थक्षेत्राणाम् ईशाः स्वामिनः तदीशाः देवाः, तेषाम् ।
माहात्म्यानि पवित्रीकरणज्ञानभक्त्यादिपुरुषार्थप्रदत्वादिरूपसामर्थ्यानि ।
कतिपयैः परिमितैः । **पद्यैः** पद्यानि छन्दोबद्धवाक्यानि, तैः । मतिमनतिक्रम्य
यथामति[२], अव्ययम् । स्वबुद्ध्यनुसारेणेत्यर्थः । **स्तौति** स्तुतिं करोति ।
'ष्टुञ् स्तुतौ' इति धातोर्लट् । 'उतो वृद्धिर्लुकि हलि'[३] इति वृद्धिः । गर्व-
परिहाराय प्रथमपुरुषप्रयोगः ।।५।।

परशुरामक्षेत्रम्

आ जन्मभूमेरित्युक्तिमनुसृत्य इदानीं स्वजन्मभूमिं स्तौति – **कर्ण इति** ।।

कर्णे पदन्यस्तरुचीरिरंसुर्वाराशिवस्त्रं जघनाद्रि यस्याः ।
अमूमुचद्बाणकरेण भूमेः श्रीभार्गवः सा जयति क्षितिर्नः ।।६।।


भूमेः, कर्णः कर्णस्थानीयप्रदेशः, तस्मिन्, **कर्णे** गोकर्णक्षेत्र इत्यर्थः ।

ಶ್ರೀಗುರುರಾಜಾಚಾರ್ಯ ನಿಪ್ಪಾಣಿಯವರ

ಭಾವೀಸಮೀರಶ್ರೀವಾದಿರಾಜಗುರುರಾಜರು

ಎಂಬ ಗ್ರಂಥದ ಚಿತ್ರ

(ಚಿತ್ರ 4)



ಪರಿಶಿಷ್ಟಗಳು ಭಾಗ – 3

ಪರಿಶಿಷ್ಟ–13

ಸೋದೆ ಶ್ರೀತ್ರಿವಿಕ್ರಮದೇವಾಲಯದ ಶಿಲಾಶಾಸನದ ಆದ್ಯಂತ

ಸ್ವಸ್ತಿ ಶ್ರೀವಿಜಯಾಭ್ಯುದಯ ನೃಪಶಾಲಿವಾಹನಶಕ ವರ್ಷ 1515ನೇ ವಿಜಯ ಸಂವತ್ಸರದ ಕಾರ್ತಿಕ ಶುದ್ಧ 15ರಲ್ಲಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ಶ್ರೀವೆಂಕಟಪತಿಮಹಾರಾಜರು ಸಮಸ್ತ ರಾಜ್ಯವನ್ನು ಸದ್ಧರ್ಮದಿಂದ ಪರಿಪಾಲಿಸುತ್ತಿದ್ದ ಸಮಯದಲ್ಲಿ ಅವರ ಆಜ್ಞಾಧಾರಕರಾದ ಸೋದೆಯ ಅರಸಪ್ಪ ನಾಯಕರು ಸೋದೆಯ ರಾಜ್ಯವನ್ನು ಸದ್ಧರ್ಮದಿಂದ ಪಾಲಿಸಿಕೊಂಡು ಬಹುಕಾಲದಲ್ಲಿ ಅವರ ಗುರುಗಳು ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮದ್ವಾಗೀಶತೀರ್ಥ–ಶ್ರೀಪಾದಒಡೆಯರ ಕರಕಮಲ ಸಂಜಾತರಾದ ಶ್ರೀಮದ್‌ವಾದಿರಾಜತೀರ್ಥ–ಶ್ರೀಪಾದಂಗಳವರು ತಮಗೆ ಪ್ರಸನ್ನರಾಗಿ ಕಾಶೀದೇಶದಿಂದ ಬಂದ ಶ್ರೀತ್ರಿವಿಕ್ರಮ ದೇವರಿಗೆ ದೇವಸ್ಥಾನವನ್ನು ಕಟ್ಟಿಸಿ, ಅಲ್ಲಿ ಸ್ವಾಮಿಯ ಪ್ರತಿಷ್ಠೆ ಮಾಡಿಸುತ್ತ ಬ್ರಾಹ್ಮಣರ ಮನೆಯನ್ನು ಕಟ್ಟಿಸಿ ದೇವರ ಸೇವೆಗೆ ಶ್ರೀತ್ರಿವಿಕ್ರಮಪುರದಲ್ಲಿ ಇರಿಸಿ ದೇವರ ಅಮೃತ ಪಡಿ, ನಂದಾದೀಪ್ತಿ, ತ್ರಿಬಲಿ ಪಂಚಪರ್ವರಥೋತ್ಸವ ಅಂಗೋಪಾಂಗ ವೈಭವ ಮೊದಲಾದ ಸೇವೆಗಳು ಆಚಂದ್ರಾರ್ಕವಾಗಿ ನಡೆಯುವ ಅಷ್ಟಾಂಗದಲ್ಲಿ ಕಟ್ಟು ಮಾಡಿ ತಾವು ತಮ್ಮ ವಿದ್ಯಾಬಲದಿಂದ ಪಡಿಸಿದ ಗ್ರಾಮಶೀಮೆಗಳ ಶಿಲಾಶಾಸನಪೂರ್ವಕವಾಗಿ ಶ್ರೀತ್ರಿವಿಕ್ರಮ ದೇವರ ಚರಣಾರವಿಂದದಲ್ಲಿ ಧಾರಾಪೂರ್ವಕವಾಗಿ ಸಮರ್ಪಿಸಿದ ಶಿಲಾಶಾಸನದ ಕ್ರಮವೆಂತೆಂದರೆ . . . ಇಂತಿ ಗ್ರಾಮಗಳಿಗೆ ಪ್ರಾಕ್ಕು ಪ್ರಮಾಣ ಸಲ್ಲುವ ಛಪ್ಪನಶೀಮೆ ಒಳಗುಳ್ಳ ಗದ್ದೆ, ತೋಟಗಳಿಗೆ ಏನು ಬಂದ ಅಷ್ಟು ಅಷ್ಟಭೋಗ ತೇಜಸಾಮ್ಯವನ್ನು ತಾವು ಪ್ರತಿಷ್ಠೆ ಮಾಡಿದ ಶ್ರೀತ್ರಿವಿಕ್ರಮ ದೇವರು, ಲಕ್ಷ್ಮೀನಾರಾಯಣ ದೇವರು, ಮಠದ ಹಯಗ್ರೀವ ದೇವರು, ತಿರುಮಲ್ಲದೇವರು ಉತ್ಸವಮೂರ್ತಿ ಧವಳಗಂಗೆ, ಹನುಮಂತ ದೇವರು, ಚಿನ್ನದ ವೃಂದಾವನ ಮೊದಲಾದ ದೇವರುಗಳ ಅಮೃತ ಪಡಿ ನಂದಾದೀಪ್ತಿ ನಿತ್ಯ ತ್ರಿಬಲಿ ಪಂಚಪರ್ವಕಾರ್ತಿಕ ಪೂಜೆ ರಥೋತ್ಸವ ಮೊದಲಾದ ಸೇವೆಗೆ ಅನುಕೂಲ ಮಾಡಿಕೊಂಡು ಆಚಂದ್ರಾರ್ಕವಾಗಿ ನಡೆಯುವಂತೆ ವಾದಿರಾಜತೀರ್ಥ ಶ್ರೀಪಾದಂಗಳವರು ತಮ್ಮ ಶಿಷ್ಯ ಪರಂಪರೆಯಾಗಿ ದೇವರ ಸೇವೆಯು ನಡೆಸಿಕೊಂಡು ಇಹುದು ಎಂದು ಕಟ್ಟು ಮಾಡಿದ ಶಿಲಾಶಾಸನ . . . ಅರಸಪ್ಪ ನಾಯಕರು ಶ್ರೀತ್ರಿವಿಕ್ರಮ ದೇವರಿಗೆ ಕಾಲಂಪ್ರತಿಯಲ್ಲಿ ಕೊಡುವ ಕಾಣಿಕೆಗೆ 150 ವರಹ ಹಣವನ್ನು ರಥೋತ್ಸವ ಸೇವೆಗೆ ಸಮರ್ಪಿಸಿದೆವು. ಈ ಧರ್ಮಗಳನ್ನು (ಆಚಂದ್ರಾರ್ಕವಾಗಿ ವಾದಿರಾಜತೀರ್ಥ ಶ್ರೀಪಾದಂಗಳವರು ತಮ್ಮ ಶಿಷ್ಯ ಪರಂಪರೆಯಾಗಿ ನಡೆಸುವುದು. . . .) ಶಾ.ಶಕ 1504 ಚಿತ್ರಭಾನು ಸಂ. ರದ ವೈಶಾಖ ಶು. 15ಯು ಬುಧವಾರದಲ್ಲು ಶ್ರೀತ್ರಿವಿಕ್ರಮ ದೇವರ ಪ್ರತಿಷ್ಠೆ ಮಾಡಿದ ಮುಹೂರ್ತ.

605


ಭಾವಿಸಮೀರಶ್ರೀವಾದಿರಾಜಗುರುರಾಜರು

ಶ್ರೀ ಪುಷ್ಕರಪ್ರಸಾದಾಚಾರ್ಯರ (ಇಂದಿನ ಶ್ರೀಶ್ರೀವಿದ್ಯಾವಿಜಯತೀರ್ಥರ) ಹಾಗೂ ಶ್ರೀ ನವಲಗುಂದರವರ ಕೃತಿ

ಶ್ರೀ ಜಯತೀರ್ಥರ ಮೂಲ ವೃಂದಾವನ ಸ್ಥಳ: ಗಜಗಹ್ವರ

ಎಂಬ ಗ್ರಂಥದ ಚಿತ್ರ

(ಚಿತ್ರ 5)



ಕ್ರ.ಸಂ.	ಇಸ್ವಿ	ವಿವರಗಳು
32	1591	ವೇದನಿಧಿಗಳಿಗೆ ಆಶ್ರಮ
33	1591 – 96	ಈ ಅವಧಿಯಲ್ಲಿ ಸೋದೆಮಠ(ಕುಂಭಾಸಿ ಮಠ)ದಲ್ಲಿ ಶ್ರೀವಾದಿರಾಜರು, ಶ್ರೀವೇದವೇದ್ಯರು, ಶ್ರೀವಿದ್ಯಾನಿಧಿಗಳು ಮತ್ತು ಶ್ರೀವೇದನಿಧಿಗಳು – ಎಂಬ ನಾಲ್ವರು ಸ್ವಾಮಿಗಳಿದ್ದರು. ಇದೇ ಅವಧಿಯಲ್ಲಿ ಬಿಡಿಶ್ಲೋಕಗಳ ಸ್ವರೂಪದಲ್ಲಿದ್ದ 'ತೀರ್ಥಪ್ರಬಂಧ'ಕ್ಕೆ ಪಕ್ಷಿಮಾದಿ ಪ್ರಬಂಧಾನುಸಾರಿಯಾದ ವರ್ಗೀಕೃತ ಸ್ವರೂಪವನ್ನು ನೀಡಲಾಯಿತು.
34	1596	ಕುಂಭಾಸಿಯಲ್ಲಿ ವಿದ್ಯಾನಿಧಿಗಳ ವೃಂದಾವನ ಪ್ರವೇಶ
35	1596 – 98	ಶ್ರೀವಾದಿರಾಜರ 5ನೆಯ ಪರ್ಯಾಯ ಸೋದೆಯಲ್ಲಿ ವೇಣುಗೋಪಾಲಕೃಷ್ಣನನ್ನು ಪ್ರತಿಷ್ಠಾಪಿಸಿ – ಪ್ರತಿಕೃಷ್ಣಕ್ಷೇತ್ರವನ್ನಾಗಿಸಿ, ಉಡುಪಿಯಲ್ಲಿ ವೇದವೇದ್ಯರಲ್ಲಿ ಸನ್ನಿಹಿತರಾಗಿ ಅಲ್ಲಿನ ಪರ್ಯಾಯವನ್ನು ನೆರವೇರಿಸಿದರು.
36	1598 – 1600	ಉಡುಪಿ, ಸೋದೆ, ಸುತ್ತಮುತ್ತಲು ಮಾತ್ರ ಸಂಚಾರ
37	1601	ಸಶರೀರ ವೃಂದಾವನ ಪ್ರವೇಶ ಸೋದೆಯಲ್ಲಿ ಪಂಚವೃಂದಾವನ ಸನ್ನಿಧಿಯಲ್ಲಿ ಐದು ತೇಜೋರೂಪಗಳಿಂದ.

'ತೀರ್ಥಪ್ರಬಂಧ'ದಲ್ಲಿ ಸೇರಿಸದೇ ಇದ್ದ ಇನ್ನೂ ಕೆಲವು ಕ್ಷೇತ್ರಗಳನ್ನು ಶ್ರೀರಾಜರು ಸಂದರ್ಶಿಸಿದ್ದು, ಅವುಗಳ ಸ್ತುತಿಗಳನ್ನು ಅವರ ಇತರ ಕೃತಿಗಳಲ್ಲಿ, ಪದಗಳಲ್ಲಿ ಕಾಣಬಹುದು. ಉದಾ: ಪಿಂಡಾರಕ ಕ್ಷೇತ್ರ, ಊರ್ಧ್ವ ಬದರಿ, ಗಂಡಕೀ, ಕನ್ಯಾರ್ಪಾಡಿ, ಉಂಡಾರು, ಬೀಳಿಗಿ, ಮಿಶ್ರಿಕ್, ಬೇಲೂರು, ಧರ್ಮಸ್ಥಳ, ಶೃಂಗೇರಿ, ಶಾಲ್ಮಲಿ ಇತ್ಯಾದಿ.

ಆಧಾರ : ಶ್ರೀವಾದಿರಾಜಗುರುವರಚರಿತಾಮೃತಂ, ಶ್ರೀವಾದಿರಾಜಗುಣರತ್ನಮಾಲಾ, 'ಯುಕ್ತಿಮಲ್ಲಿಕಾದಿ' ಶ್ರೀರಾಜರ ಗ್ರಂಥಗಳು, ಕೀರ್ತನೆಗಳು ಮತ್ತು ಶಾಸನಗಳು.

ಶ್ರೀವಾದಿರಾಜರು ಸೋದೆಯಲ್ಲಿ ಶ್ರೀತ್ರಿವಿಕ್ರಮದೇವರ ಪ್ರತಿಷ್ಠೆ (1582) ಮಾಡಿದ ಮಾಹಿತಿಯೂ 'ತೀರ್ಥಪ್ರಬಂಧ'ದಲ್ಲಿ ಸೇರಿರುವುದರಿಂದ, ಈ ಕಾಲದ ಆಧಾರದಿಂದ, ಶ್ರೀವಾದಿರಾಜರು 1586 ರಿಂದ 88ರ ಅವಧಿಯಲ್ಲಿ ಗಜಗಹ್ವರಕ್ಕೆ ಆಗಮಿಸಿರುವುದು ಖಚಿತವಾಗುತ್ತದೆ. ಅವರು ಸಂದರ್ಶಿಸಿದ ಸಂದರ್ಭಕ್ಕೆ ಗಜಗಹ್ವರದ ತುಂಗಭದ್ರಾನಡುಗಡ್ಡೆಯಲ್ಲಿ:

ಶ್ರೀಃ

ಶ್ರೀಶ್ರೀನಿವಾಸೇಽಸ್ತು ಮೇ ಮನಃ

ಶ್ರೀಗುರುಭ್ಯೋನಮಃ

ಜಗದ್ಗುರುಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸತ್ಸಿದ್ಧಾಂತದ ಪ್ರತಿಷ್ಠಾಪನೆಗಾಗಿ

ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡ

ಸಕಲವಿದ್ವದ್ವೃಂದಕ್ಕೆ

ಹೃತ್ಪೂರ್ವಕ ನಮನಗಳೊಂದಿಗೆ ಸಮರ್ಪಿತವಾದ

ಜಿಜ್ಞಾಸಾಪತ್ರ

ಪ್ರಿಯ ಆಧ್ಯಾತ್ಮಿಕಬಂಧುಗಳೇ,

ಪ್ಲವನಾಮಸಂವತ್ಸರದ ಫಾಲ್ಗುಣಮಾಸದ ಕೃಷ್ಣಪಕ್ಷದ ತೃತೀಯಾ (**21-03-2022**) ದಿನದಂದು ಶ್ರೀಸೋದಾಗುರುರಾಜರ ಮಧ್ಯಾರಾಧನಾಪರ್ವಕಾಲದಲ್ಲಿ ಶ್ರೀಸೋದಾಕ್ಷೇತ್ರದಲ್ಲಿ ಶ್ರೀಬಾಳಗಾರು, ಶ್ರೀಭೀಮನಕಟ್ಟೆ, ಹಾಗೂ ಶ್ರೀಶೀರೂರು ಮಠಾಧೀಶರ ಉಪಸ್ಥಿತಿಯಲ್ಲಿ ನಡೆದ ಸಭಾಕಾರ್ಯಕ್ರಮದಲ್ಲಿ ಶ್ರೀಸೋದೆಮಠದ ಪೀಠಾಧೀಶರಾದ ಶ್ರೀಶ್ರೀವಿಶ್ವವಲ್ಲಭತೀರ್ಥಶ್ರೀಪಾದರು ನೀಡಿದ ಸಂದೇಶವು ಶ್ರೀಸೋದಾಗುರುರಾಜರ ವಿಶಿಷ್ಟಕೃತಿ ತೀರ್ಥಪ್ರಬಂಧದ ಕುರಿತಾಗಿದ್ದು, ಸ್ಪಷ್ಟೀಕರಣದೃಷ್ಟಿಯಿಂದ ಹೊರಟಿದ್ದರೂ ಗ್ರಂಥದ ನಿರ್ದುಷ್ಟತೆಯ ಸಂದೇಹಕ್ಕೆ ನಿಮಿತ್ತವಾಯಿತು. ಏಕೆಂದರೆ, ಅವರ ಉಪನ್ಯಾಸವು ನಮ್ಮ ಸಮಾಜದ ಒಂದು ವಿಶಿಷ್ಟಪರಂಪರೆಯಲ್ಲಿ ವಿಜೃಂಭಿಸಿದ ವಿದ್ವನ್ಮೂರ್ಧನ್ಯಯತಿವರೇಣ್ಯರ ನಾಮಧೇಯವನ್ನು ಉಚ್ಚರಿಸದೆಯೇ ಅವರ ನಿರೂಪಣೆಯನ್ನು ಖಂಡಿಸುವ ಉದ್ದೇಶವನ್ನು ಹೊಂದಿತ್ತು. ಅದು, ಆ ವಿದ್ವನ್ಮೂರ್ಧನ್ಯಯತಿವರೇಣ್ಯರ ನಿಲುವು ಅಪ್ರಾಮಾಣಿಕ ಎಂದು ಸಾರುತ್ತಿತ್ತು. ಆದರೆ, ಆ ಪ್ರಯತ್ನವು ವಿದ್ವನ್ಮೂರ್ಧನ್ಯಯತಿವರೇಣ್ಯರ ಪ್ರಬುದ್ಧಶಾಸ್ತ್ರೀಯವ್ಯುತ್ಪತ್ತಿಗೆ ಹಾಗೂ ಕೀರ್ತಿಗೆ ಕುಂದು ತರಲು ಸಮರ್ಥವಾಗಲಿಲ್ಲ. ಏಕೆಂದರೆ ಸಾಮನ್ಯಜಿಜ್ಞಾಸುವೃಂದದ ಮನವನ್ನು ಮುಟ್ಟಿದ ಹಾಗೂ ದುರಾಗ್ರಹವಿರದ ವಿದ್ವನ್ಮೂರ್ಧನ್ಯಯತಿವರೇಣ್ಯರ ಅಂತಹ ಪ್ರಬುದ್ಧವಾದ ಚಿಂತನೆಯೇ ಕಾರಣ. ಆ ವಿದ್ವನ್ಮೂರ್ಧನ್ಯಯತಿವರೇಣ್ಯರ ಚಿಂತನೆಯ ನೆರಳಲ್ಲಿ ವಿವೇಕಿಯಾದ ಜಿಜ್ಞಾಸುವು ಶ್ರೀಸೋದೆಶ್ರೀಪಾದರ ಅಂದಿನ ಉಪನ್ಯಾಸದ ಸುತ್ತ ನೋಡಲು ಹೊರಟರೆ ವ್ಯಕ್ತವಾಗುವ ಜಿಜ್ಞಾಸೆಗಳು ಇವುಗಳು. ದಯವಿಟ್ಟು ತಾವು ಈ ಜಿಜ್ಞಾಸೆಗಳನ್ನು ಪರಿಹರಿಸಿ ಅನುಗ್ರಹಿಸಬೇಕೆಂದು ಸವಿನಯ ಪ್ರಾರ್ಥನೆ.

<u>ಪರಮಪೂಜ್ಯಶ್ರೀಸೋದೆಶ್ರೀಪಾದರ ಉಪನ್ಯಾಸದಲ್ಲಿನ ಅಂಶಗಳು ಎರಡು-</u>

1. "ಯತ್ರ ಗಜಗಹ್ವರೇ। ಜಯತೀರ್ಥಾಚಾರ್ಯಂ ವರ್ಣಯತಿ ಮಾಧ್ವಗ್ರಂಥಾನಿತಿ। ಎಂದು ಇರಬೇಕು" ಎಂಬ ಆ ವಿದ್ವನ್ಮೂರ್ಧನ್ಯಯತಿವರೇಣ್ಯರ ನಿರೂಪಣೆಯ ನಿರಾಕರಣೆಯ ಪ್ರಯತ್ನ.
2. "ಶ್ರೀಸೋದಾಗುರುರಾಜರು ಇದ್ದಲ್ಲೇ ತೀರ್ಥಪ್ರಬಂಧವನ್ನು ರಚಿಸಿದ್ದಲ್ಲ, ಬದಲಾಗಿ ಸಂಚರಿಸುತ್ತಲೇ ರಚಿಸಿದ್ದು" ಎಂದು ಸಮರ್ಥಿಸುವ ಪ್ರಯತ್ನ.

ಇವೆರಡರಲ್ಲಿ ಮೊದಲ ಅಂಶವನ್ನು ಗಮನಿಸುವುದಾದರೆ, ಪರಮಪೂಜ್ಯರಾದ ಆ ವಿದ್ವನ್ಮೂರ್ಧನ್ಯ-ಯತಿವರೇಣ್ಯರ ನಿರೂಪಣೆಯು ಸಹಜತತ್ವವಾದ ನಿರೂಪಣೆ. ಸಂಶೋಧನಾಶೀಲರಿಗೆ ಅತ್ಯುತ್ತಮವಾದ ದಿಕ್ಸೂಚಿ. ನಿಷ್ಪಕ್ಷಪಾತಧೋರಣೆಯುಳ್ಳವರಿಗೆ ಮಾತ್ರ ಅದು ಸದಾ ರುಚಿ.

ಪರಮಪೂಜ್ಯಶ್ರೀಸೋದೆಶ್ರೀಪಾದರೇ ಉಲ್ಲೇಖಿಸಿದ ಮತ್ತು ನೇರಪ್ರಸಾರದಲ್ಲಿ ತೋರಿಸಿದ ಐದಾರು ಹಸ್ತಪ್ರತಿಗಳಲ್ಲಿರುವ ಬರವಣಿಗೆಗಳು ಒಂದೇ ರೂಪದಲ್ಲಿಲ್ಲ. ಅದೂ ಕೂಡ ಶ್ರೀಸೋದಾಗುರುರಾಜರು ಶ್ರೀಟೀಕಾಕೃತ್ಪಾದರನ್ನು ಗಜಗಹ್ವರದಲ್ಲಿ ವರ್ಣಿಸಿದ್ದಾರೆಂಬ ಅವರದೇ ನಿಲುವಿಗೆ ಬಾಧಕ. ಹಸ್ತಪ್ರತಿಗಳ ಬಲದಿಂದ ಗಜಗಹ್ವರದಲ್ಲಿಯೇ ಇದ್ದು ವರ್ಣಿಸಿದ್ದು ಎಂಬುವುದು ಸ್ಪಷ್ಟಪಡುವುದಿಲ್ಲ. ಆದರೆ, ಆ ವಿದ್ವನ್ಮೂರ್ಧನ್ಯ-ಯತಿವರೇಣ್ಯರ ಹೇಳಿದ "**ಯತ್ರ ಗಜಗಹ್ವರೇ। ಜಯತೀರ್ಥಾಚಾರ್ಯಂ ವರ್ಣಯತಿ। ಮಾಧ್ವಗ್ರಂಥಾನಿತಿ।**" ಎನ್ನುವ ವಾಕ್ಯವೂ ಅವೇ ಹಸ್ತಪ್ರತಿಗಳ ಪೈಕಿ ಒಂದರಲ್ಲಿದೆ (ಆನುಪೂರ್ವಿ ಮಾತ್ರ ವ್ಯತ್ಯಾಸವಿದೆ: "ಜಯತೀರ್ಥಾಚಾರ್ಯಂ ವರ್ಣಯತಿ ಮಾಧ್ವಗ್ರಂಥಾನಿತಿ। ಯತ್ರ ಗಜಗಹ್ವರೇ।" ಎಂದು). ಇದರಿಂದ - "**ಯತ್ರ**" ಎಂಬ ಪ್ರತೀಕಗ್ರಹಣವನ್ನು ಮಾಡಿ "**ಗಜಗಹ್ವರೇ**" ಎಂಬ ಅರ್ಥವನ್ನು ಬರೆಯುವ ಔಚಿತ್ಯದ ಹಿನ್ನೆಲೆಯ ಆ ವಿದ್ವನ್ಮೂರ್ಧನ್ಯಯತಿವರೇಣ್ಯರ ವಚನವೇ ಅತ್ಯಂತಪ್ರಾಮಾಣಿಕವೆಂದು ಸ್ಪಷ್ಟವಾಗುತ್ತದೆ.



TP 728-S-92, 56F ತುಳುಲಿಪಿ


ಜಯತೀರ್ಥಾರ್ಯಂ ವರ್ಣಯತಿ ಮಾಧ್ವಗ್ರಂಥಾನಿತಿ । ಯತ್ರ ಗಜಗಹ್ವರೇ । ಯಃ ಜಯತೀರ್ಥಮುನಿಃ ಜಯತೀರ್ಥಾಖ್ಯೋ ಮುನಿಃ ॥

<u>ಪರಮಪೂಜ್ಯಶ್ರೀಸೋದೆಶ್ರೀಪಾದರ ಹೇಳಿದ ವಿಷಯದಲ್ಲಿ ಈ ಹಸ್ತಪ್ರತಿಗಳ ವಿಷಯದಲ್ಲಿಯೇ ಪ್ರಧಾನವಾದ ಜಿಜ್ಞಾಸೆ</u>:**-**

ಪರಮಪೂಜ್ಯಶ್ರೀಸೋದೆಶ್ರೀಪಾದರು ತಿಳಿದಂತೆ ಹಾಗೂ ತಿಳಿಸಿದಂತೆ "**ಮಾಧ್ವಗ್ರಂಥಾನ್ ಸ್ವಬಂಧೂನಿವ ಸರಸಹೃದಾಲಿಂಗ್ಯ ವಿಜ್ಞಾತಭಾವಃ ಸಂಯೋಜ್ಯಾಲಂಕೃತಾಭಿಃ ಸ್ವಸಹಜಮತಿಸಂಭೂತಿವಾಗ್ಭಿರ್ವಧೂಭಿಃ। ಕೃತ್ವಾನ್ಯೋಕ್ತೀಶ್ಚ ದಾಸೀರ್ಬುಧಹೃದಯಗೃಹಂ ಪ್ರೌಢವೃತ್ತೀಶ್ಚ ವೃತ್ತೀರ್ದತ್ವಾನ್ಯೋನ್ಯಾಭಿಯೋಗಂ ಜಯಮುನಿರಸಕೃದ್ವೀಕ್ಷ್ಯ ರೇಮೇ ಕೃತಾರ್ಥಃ॥**" ಎಂಬ **ತೀರ್ಥಪ್ರಬಂಧ**ದ ಶ್ಲೋಕದಿಂದ ಗಜಗಹ್ವರದಲ್ಲಿಯೇ ಶ್ರೀಜಯತೀರ್ಥಗುರುಸಾರ್ವಭೌಮರನ್ನು ವರ್ಣಿಸಿದ್ದು ಎಂದು ಸಮರ್ಥಿಸುವುದಕ್ಕೆ "**ಜಯತೀರ್ಥಾರ್ಯಂ ವರ್ಣಯತಿ ಮಾಧ್ವಗ್ರಂಥಾನಿತಿ। ಯತ್ರ ಗಜಗಹ್ವರೇ। ಯೋ ಜಯಮುನಿಃ ಜಯತೀರ್ಥಾಖ್ಯೋ ಮುನಿಃ॥**" ಎಂಬ ವ್ಯಾಖ್ಯಾನವೇ ಪ್ರಧಾನಸೋಪಾನವೆನ್ನುವುದಾದರೆ ಇಲ್ಲಿ "**ಯತ್ರ**" ಎನ್ನುವ ಶಬ್ದವು ಪ್ರತೀಕವಾಗಿದೆಯೋ? ಇಲ್ಲವೋ? ಪ್ರತೀಕವಾಗಿದೆಯಂತಾದರೆ ಆ ಶ್ಲೋಕದಲ್ಲಿ ಇರದ "**ಯತ್ರ**" ಶಬ್ದಕ್ಕೆ ವ್ಯಾಖ್ಯಾನಕಾರರು ಪ್ರತೀಕಗ್ರಹಣವನ್ನು ಮಾಡಿ "**ಗಜಗಹ್ವರೇ**" ಎಂದು ಅರ್ಥ ಬರೆಯಲು ಸಾಧ್ಯವೇ? ಒಂದು ವೇಳೆ ಪ್ರತೀಕವಾಗದೇ ಬರೆದಿದ್ದಲ್ಲಿ ಅದು ಸಾಧುವೇ!? ಏಕೆಂದರೆ **ಮೂಲಗ್ರಂಥಕರ್ತೃಗಳಿಗೆ ವಿವಕ್ಷಿತವಾಗದ** ಹಾಗೂ **ಮೂಲಶ್ಲೋಕದಲ್ಲಿ ಸರ್ವಾತ್ಮನಾ ಸೂಚಿತವಾಗದ** "ಗಜಗಹ್ವರ ಸಂಬಂಧ"ದ ನಿರೂಪಣೆ.


